ಮಾನಸಿ

ತಿಂಗಳ ಪತ್ರಿಕೆ ಡಿಸೆಂಬರ್ 1995

- ಮಹಿಳಾ ಚಳವಳಿ ಮತ್ತು ಸಮಾನ ನಾಗರಿಕ ಸಂಹಿತೆ
- ಕೌಟುಂಬಿಕ ಕಾನೂನುಗಳು ಮತ್ತು ಅವುಗಳಲ್ಲಡಗಿರುವ ಸ್ತ್ರೀ ವಿರೋಧೀ ಅಂಶಗಳು
- ಐಚ್ಛಿಕ ಸಮಾನ ನಾಗರಿಕ ಸಂಹಿತೆ
- ಸಮಾನ ನಾಗರಿಕ ಸಂಹಿತೆಯ ಪರವಾಗಿ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 12 ಸಂಚಿಕೆ : 11

ಡಿಸೆಂಬರ್ - 1995

ಸಂಪಾದಕೀಯ ಮಂಡಳಿ :

ರಾಜೇಶ್ವರಿ ಎಚ್. ಎಸ್.,
ಚಂಪಾವತಿ ಎಚ್. ಎಸ್., ಸರಸ್ವತಿ ದು.,
ಸವಿತ ಎ., ಗಾಯತ್ರಿ ವಿ.

ಸಲಹೆ-ಸಹಕಾರ

ಇಳಾ ವಿಜಯಾ

ಸಹ ಸಂಪಾದಕರು :

ವನಜಾ ವೆಂ.
ಡಾ॥ ಪ್ರಭಾವತಿ ಎಸ್. ವಿ.
ನೀಲಾಂಜನ

ವಿಳಾಸ :

"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ : **3-00 ರೂ.**
ವಾರ್ಷಿಕ ಚಂದಾ : **25 ರೂ.**
ಆಜೀವ ಚಂದಾ : **300 ರೂ.**

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು,

ಈ ಸಂಚಿಕೆಯಲ್ಲಿ...

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು-೫೬೦ ೦೬೭



ಸಂಪಾದಕೀಯ

ಪ್ರತಿಯೊಂದು ಧಾರ್ಮಿಕ ಸಮುದಾಯಗಳೂ ಪ್ರತ್ಯೇಕವಾದ ವೈಯಕ್ತಿಕ ಕಾನೂನುಗಳನ್ನು ಹೊಂದಿದ್ದು ಈ ಎಲ್ಲ ಕಾನೂನುಗಳೂ ವಿವಾಹ, ವಿಚ್ಛೇದನ, ಆಸ್ತಿಹಕ್ಕು, ಮಕ್ಕಳ ವಾರಸುದಾರಿಕೆ ಇತ್ಯಾದಿಗಳ ಸಂಬಂಧದಲ್ಲಿ ಮಹಿಳೆಯರನ್ನು ಸಮಾನ ಹಕ್ಕುಗಳಿಂದ ವಂಚಿತಗೊಳಿಸಿರುವುದು ಭಾರತದಲ್ಲಿ ಮಹಿಳೆಯರು ಒಳಗಾಗಿರುವ ಕಾನೂನೀಕೃತ ತಾರತಮ್ಯಕ್ಕೆ ನಿದರ್ಶನವಾಗಿದೆ. ಇಂತಹ ಸ್ಥಿತಿಯಲ್ಲಿ ಸಮಾನ ನಾಗರಿಕ ಸಂಹಿತೆಯ ರೂಪದಲ್ಲಿ ನ್ಯಾಯಯುತವಾದ, ಲಿಂಗ ಸಮಾನತ್ವ ಹೊಂದಿದ ಕಾನೂನುಗಳ ಅವಶ್ಯಕತೆಯನ್ನು ಮಹಿಳಾ ಚಳವಳಿ ಪ್ರತಿಪಾದಿಸುತ್ತಾ ಬಂದಿದೆ. ಆದೇನೆಯಾದರೂ ಕಾಲಾಂತರದಲ್ಲಿ ಮೂಲಭೂತವಾದೀ ಶಕ್ತಿಗಳು ಈ ಸಮಾನ ನಾಗರಿಕ ಸಂಹಿತೆಗಾಗಿನ ಬೇಡಿಕೆಯನ್ನು ತಮ್ಮದಾಗಿಸಿಕೊಂಡು ಅಪಾಯಕಾರೀ ರೀತಿಯಲ್ಲಿ ಅದನ್ನು ಕೋಮುವಾದಿಗೊಳಿಸಿವೆ. ಇಲ್ಲಿ ಸಮಾನ ನಾಗರಿಕ ಸಂಹಿತೆಯ ಪ್ರಶ್ನೆಯೆನ್ನುವುದು ಬಹುಸಂಖ್ಯಾತ vs ಅಲ್ಪಸಂಖ್ಯಾತರ ಅನನ್ಯತೆಯ ಪ್ರಶ್ನೆಯಾಗಿ ಬಿಟ್ಟು ಮಹಿಳೆಯರ ಹಕ್ಕುಗಳ ಪ್ರಶ್ನೆ ಸಂಪೂರ್ಣ ಹಿಂದಕ್ಕೆ ಸರಿದಿದೆ. ಇದರಿಂದಾಗಿ ಮಹಿಳಾ ಚಳವಳಿಯೇ ಸಮಾನ ನಾಗರಿಕ ಸಂಹಿತೆ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಹಕ್ಕಿನ ಸಂಬಂಧದಲ್ಲಿ ವಿರೋಧಾತ್ಮಕ ನಿಲುವುಗಳನ್ನು ತೆಗೆದುಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ಮಹಿಳಾ ಚಳವಳಿ ಸಮಾನ ನಾಗರಿಕ ಸಂಹಿತೆಯೆಡೆಗಿನ ತನ್ನ ನಿಲುವನ್ನು ಪುನರ್‌ಪರಿಶೀಲಿಸುವಂತಹ ಮತ್ತು ಸಮರ್ಥನೀಯಗೊಳಿಸುವಂತಹ ಒತ್ತಡದ ನಿರ್ಮಾಣವಾಗಿದೆ.

ಮುಂದಿನ ದಿನಗಳಲ್ಲಿ ಲೋಕಸಭಾ ಚುನಾವಣೆಗೆ ದೇಶ ಸಿದ್ಧವಾಗುತ್ತಿರುವಾಗ, ಸಮಾನ ನಾಗರಿಕ ಸಂಹಿತೆ ಚುನಾವಣಾ ಸೂತ್ರಗಳ ಮುಂಚೂಣಿಯಲ್ಲಿ ಸೇರಿಕೊಳ್ಳುವುದರಲ್ಲಿ ಅನುಮಾನವಿಲ್ಲ. ಚುನಾವಣೆಯಲ್ಲಿ ಎರಡನೇ ದೊಡ್ಡ ಪಕ್ಷವಾಗಿ ಹೊರಬರುತ್ತಿರುವ ಬಿ.ಜೆ.ಪಿ. ಒಂದು ಕಡೆ ಮಾತನಾಡುತ್ತಲೇ ಮತ್ತೊಂದು ಕಡೆಯಲ್ಲಿ ತನ್ನ ಪಕ್ಷದ ಪ್ರಣಾಳಿಕೆ ಹಿಂದೂ ಸ್ವರೂಪಿಯಾಗಿರುವುದಾಗಿ ಹೇಳಿಕೊಂಡಿದೆ. ಬಾಬ್ರಿ ನಿರ್ನಾಮಗೊಂಡ ನಂತರದ ದಿನಗಳಲ್ಲಿ ಶಾಸಕಾಂಗದಂತಹ ರಾಜ್ಯ ವ್ಯವಸ್ಥೆಯ ಅಂಗಗಳ ಕೋಮುವಾದೀ ಆಸಕ್ತಿಗಳು ಸ್ಪಷ್ಟಗೊಳ್ಳುತ್ತಿವೆ. ಇದು 'ಹಿಂದೂತ್ವ'ವನ್ನು ವ್ಯವಸ್ಥಿತ ಧರ್ಮ ಅನ್ನುವುದಕ್ಕಿಂತ "ಬದುಕಿನ ಕ್ರಮ" ಎಂದು ಹೇಳುತ್ತಿದೆ. ಹೀಗೆ ತೀವ್ರವಾಗಿ ಕೋಮುವಾದಿ ಗೊಂಡಿರುವ ಸ್ಥಿತಿಯಲ್ಲಿ ಮಹಿಳಾ ಚಳವಳಿ ಸಮಾನ ನಾಗರಿಕ ಸಂಹಿತೆಯ ಪ್ರಶ್ನೆಯನ್ನು ಮಹಿಳಾ ಹಕ್ಕುಗಳ ಪ್ರತಿಪಾದನೆಯ ಮುಖ್ಯ ರಂಗಕ್ಕೆ ಪುನಃ ಎಳೆದು ತರುವ ಕ್ರಿಯೆ ಕಷ್ಟಗಳನ್ನು ಆಹ್ವಾನಿಸಿಕೊಳ್ಳುವಂತದ್ದೇ ಆಗಿದೆ.

ಶಾಬಾನೂ ಪ್ರಕರಣ ಮಹಿಳಾ ಚಳವಳಿ ಮುಖಾಮುಖಿಗೊಂಡ ಮೂಲಭೂತವಾದಿ ಪ್ರತಿರೋಧಕ್ಕೊಂದು ಜ್ವಲಂತ ಉದಾಹರಣೆಯಾಗಿದೆ. ಈ ಪ್ರಕರಣದ ಸುತ್ತ ಹುಟ್ಟಿಕೊಂಡ ವಾದ - ವಿವಾದಗಳು ಇದರ ಸಂಬಂಧದ ವಿಭಿನ್ನ ನಿಲುವುಗಳನ್ನು ಸ್ಪಷ್ಟ ತೋರಿಸಿಕೊಟ್ಟಿವೆ. ಒಂದು ಕಡೆಯಲ್ಲಿ, ರಾಜ್ಯವ್ಯವಸ್ಥೆ ಸಂಪೂರ್ಣ ನ್ಯಾಯೋಚಿತಗೊಳಿಸಿದ ಮೂಲಭೂತವಾದಿ ನಿಲುವು. ಈ ನಿಲುವು ಸಮಾಜದಲ್ಲಿ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪಾತ್ರಗಳನ್ನು ತಳ್ಳಿಹಾಕುವಂತದ್ದು. ಇದು ಮಹಿಳೆಯರು ಸಮುದಾಯ ಮತ್ತು ಸಂಸ್ಕೃತಿಯ ಪ್ರವರ್ತಕರಾಗಿ ಹೊಂದಿರುವ ದೈಹಿಕ ಮತ್ತು ತಾತ್ವಿಕ ಪಾತ್ರಗಳನ್ನು ಎತ್ತಿ ಹಿಡಿಯುತ್ತಾ ಮಹಿಳೆಯರಿಗೆ ಯಾವುದೇ ಬಗೆಯ ಹೆಚ್ಚಿನ ಮುಕ್ತತೆಯನ್ನು ನಿರಾಕರಿಸುತ್ತದೆ. ಮತ್ತೊಂದು ಕಡೆ, ಮಹಿಳೆಯರ ಒಟ್ಟು ಸ್ಥಾನಮಾನದಲ್ಲಿ ಬದಲಾವಣೆ ಬಯಸುವವರ ನಿಲುವು. ಇಲ್ಲಿ ಮೂರು ಬಗೆಯ ಆಯ್ಕೆಗಳನ್ನು ಮುಂದಿಡಲಾಯಿತು. ಪ್ರತಿ ವೈಯಕ್ತಿಕ ಕಾನೂನಿನೊಳಗಡೆಗೂ ಪ್ರಗತಿಪರ ಸುಧಾರಣೆಗಳನ್ನು ತರುವುದು; ಸಮಾನ ನಾಗರಿಕ ಸಂಹಿತೆಯನ್ನು ಐಚ್ಛಿಕಗೊಳಿಸುವುದು; ಎಲ್ಲರಿಗೂ ಅನ್ವಯಿಸುವಂತಹ ಸಮಾನ ಕಾನೂನುಗಳನ್ನು ತರುವುದು.

ನಮ್ಮ ದೃಷ್ಟಿಯಲ್ಲಿ, ವೈಯಕ್ತಿಕ ಕಾನೂನುಗಳಲ್ಲಿ ಪ್ರಗತಿಪರ ಸುಧಾರಣೆ ಕೂಡ ಸಾಂಪ್ರದಾಯಿಕವೇ ಆಗಿರುತ್ತದೆ. ಏಕೆಂದರೆ ಇದು ಮಹಿಳೆಯರಿಗೆ ಅವರ ಹಿತಾಸಕ್ತಿಯನ್ನು ಸಮುದಾಯದ ಹಿತಾಸಕ್ತಿಯಲ್ಲಿ ಒತ್ತೆಯಾಗಿಸುತ್ತದೆ. ಐಚ್ಛಿಕ ಸೆಕ್ಯುಲರ್ ಸಂಹಿತೆಯ ಕಲ್ಪನೆ ಹೆಚ್ಚು ಪ್ರಜಾತಾಂತ್ರಿಕವಾಗಿರುವಂತೆ ಕಂಡರೂ ಇಂತಹ ಆಯ್ಕೆಗೆ ಗಂಡಸರ ಒಪ್ಪಿಗೆ ಬೇಕಾಗಿದ್ದು ಪಿತೃಪ್ರಧಾನ ಕಾನೂನುಗಳಡಿ ತಾವು ಹೊಂದಿರುವ ಸದಾವಕಾಶವನ್ನು ಅವರು ಬಿಟ್ಟುಕೊಟ್ಟಾರಾದರೂ ಯಾತಕ್ಕೆ ? ಹೀಗಾಗಿ ನಮಗಿರುವ ಒಂದೇ ಆಯ್ಕೆಯ ದಾರಿಯೆಂದರೆ, ಎಲ್ಲ ಪ್ರಜೆಗಳಿಗೂ ಅನ್ವಯಿಸುವಂತಹ ಸಮಾನ ಕಾನೂನುಗಳು. ಎಲ್ಲ ವೈಯಕ್ತಿಕ ಕಾನೂನುಗಳಲ್ಲಿರುವ ಅತ್ಯುತ್ತಮ ಅಂಶಗಳನ್ನು ಹೆಕ್ಕಿ ಸಮಾನ ನಾಗರಿಕ ಸಂಹಿತೆ ರೂಪಿಸುವಂತಹ ಬಿಜೆಪಿಯ ನಿಲುವು ಮಹಿಳೆಯರ ಸಂಬಂಧದಲ್ಲಿ ಸಾಧುವೆನಿಸಲು ಸಾಧ್ಯವೇ ಇಲ್ಲ ಏಕೆಂದರೆ, ಈಗಿರುವ ವೈಯಕ್ತಿಕ ಕಾನೂನುಗಳಲ್ಲಿನ ಅತ್ಯುತ್ತಮವೆನಿಸುವ ಅಂಶಗಳೂ ಕೂಡ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ತಂದುಕೊಡಲಾರವು. ಮಹಿಳಾ ಚಳವಳಿ ಸಮಾನ ಸಂಹಿತೆಯ ವಿಷಯಗಳನ್ನು ಸಮರ್ಥನೀಯಗೊಳಿಸಿ ಇಡೀ ವಾದದ ದಿಕ್ಕನ್ನೇ ಬದಲಾಯಿಸುವ ಮೂಲಕ ಪುನಃ ಮಹಿಳಾ ಹಕ್ಕುಗಳ ಪ್ರಶ್ನೆಯನ್ನು ಕೇಂದ್ರಕ್ಕೆ ತರಬೇಕಾಗಿದೆ. ಹೆಚ್ಚೆಚ್ಚು ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯನ್ನು ತಂದು ಒಂದು ಹೊಸ ಪ್ರಜಾತಂತ್ರೀಯ ಸಂಹಿತೆಯ ರಚನೆಯ ಕಾರ್ಯವನ್ನು ಮಹಿಳಾ ಚಳವಳಿ ತನ್ನ ಮುಂದೆ ಹೊಂದಿದೆ.

ಮಹಿಳಾ ಚಳವಳಿ ಮತ್ತು ಸಮಾನ ನಾಗರಿಕ ಸಂಹಿತೆ

(ಒಂದು ಚಾರಿತ್ರಿಕ ನೋಟ)

ಶಾಭಾನು ಪ್ರಕರಣದಿಂದಾಗಿ 1985ರಿಂದಾಚೆಗೆ ಸಮಾನ ನಾಗರಿಕ ಸಂಹಿತೆಯ ಬಗ್ಗೆ ಪರ ವಿರೋಧದ ಧ್ವನಿಗಳು ಕಂಡುಬಂದಂತೆ ಹಿಂದೂ ಧರ್ಮದ ಕಾನೂನು ಗಳನ್ನು ಸುಧಾರಿಸಿ ಕ್ರೋಢೀಕರಿಸುವ ಹಂತದಲ್ಲಿಯೂ ಸಹ ಸಮಾನ ನಾಗರಿಕ ಸಂಹಿತೆಯ ಬಗ್ಗೆ ಪರ/ವಿರೋಧದ ಧ್ವನಿಗಳು ಮೂಡಿರುವ ಚರಿತ್ರೆ ನಮಗಿದೆ. 1947ರ ಏಪ್ರಿಲ್ 16ರಂದು ಸಂವಿಧಾನ ರೂಪಿಸುವ ಹಂತದಲ್ಲಿ ಮೂಲಭೂತ ಹಕ್ಕುಗಳ ಸಮಿತಿಯೊಂದು ನೇಮಕ ವಾಯಿತು. ಈ ಸಂದರ್ಭದಲ್ಲಿ ಸಮಾನತೆ ಹಾಗೂ ಸೆಕ್ಯುಲರ್ ಅಂಶಗಳಿಗೆ ಮೊದಲ ಪೆಟ್ಟು ಬಿದ್ದುದನ್ನು ನಾವು ಗಮನಿಸಬಹುದಾಗಿದೆ. ಹಿಂದೂ ಕಾನೂನುಗಳ ಸುಧಾರಣೆಯ ಸಂದರ್ಭದಲ್ಲಿ ಮಹಿಳೆಯರು ಆಸ್ತಿ, ವಿಚ್ಛೇದನ ಹಾಗೂ ವಂಶಪಾರಂಪರ್ಯದ ಹಕ್ಕುಗಳಾಗಿ ಹೋರಾಡಿದ್ದನ್ನು ನಾವು ಕಾಣುತ್ತೇವೆ. 1948ರಲ್ಲಿ ಹಿಂದೂ ಧರ್ಮದ ವೈಯುಕ್ತಿಕ ಕಾನೂನುಗಳಲ್ಲಿ ಮಾತ್ರ ಸುಧಾರಣೆಯ ಪ್ರಯತ್ನಗಳು ನಡೆದವು. ಮೂಲಭೂತ ಹಕ್ಕುಗಳ ಸಮಿತಿಯು ಸಮಾನ ನಾಗರಿಕ ಸಂಹಿತೆ ಯನ್ನು ಮೂಲಭೂತ ಹಕ್ಕೆಂದು ಮಂಡಿಸಲಿಲ್ಲ. ಅಂದರೆ ಇದು ಮೂಲಭೂತ ಹಕ್ಕಿನ ಭಾಗವಾಗುವುದಿಲ್ಲ. –ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ನ ಭಾಗವಾಗಿ ಮಾತ್ರ ಬರುತ್ತದೆ. ಭಾರತದ ಸಂವಿಧಾನದ ಪ್ರಕಾರ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಎಂದರೆ ಕಾನೂನಿನ ಪ್ರಕಾರ ನ್ಯಾಯಾಲಯದಲ್ಲಿ ಇವುಗಳನ್ನು ಜಾರಿಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ರೀತಿಯ ಸಮಾನ ನಾಗರಿಕ ಸಂಹಿತೆಯ ಬಗ್ಗೆ ವಿರೋಧ ವ್ಯಕ್ತಪಡಿಸಿದ ಮೂವರು ಮಹಿಳೆಯರೆಂದರೆ – ಎಂ.ಆರ್. ಮಸಾನಿ, ರಾಜ ಕುಮಾರಿ ಅಮೃತ್ ಕೌಲ್ ಹಾಗೂ ಹನ್ಸಾ ಮೆಹ್ತಾ. ಈ ಬಗ್ಗೆ ಇವರು ತಮ್ಮ ಸ್ಪಷ್ಟ ವಿರೋಧವನ್ನು ವ್ಯಕ್ತಪಡಿಸಿದ್ದರು.

ಇವರು ಹೇಳುತ್ತಾರೆ, "ಸಮಾನ ನಾಗರಿಕ ಸಂಹಿತೆಯು ಕೊನೆಯ ಗುರಿ ಎಂದು ಸಮಿತಿಯು ಬಹುಮತದಿಂದ ಒಪ್ಪಿಕೊಂಡು ನಿರ್ಧರಿಸಿದ 39ನೆಯ ವಿಧಿ ಬಗ್ಗೆ ನಮಗೆ ತೃಪ್ತಿ ಇಲ್ಲ. ಧರ್ಮದ ಮೇಲೆ ಅವಲಂಬಿತವಾಗಿರುವ ವೈಯುಕ್ತಿಕ ಕಾನೂನುಗಳ ಅಸ್ತಿತ್ವವು ಭಾರತದ ರಾಷ್ಟ್ರೀಯತೆ ಬೆಳೆಸುವಲ್ಲಿ ಅಡ್ಡಿ ಯಾಗಿರುವ ವಿಚಾರಗಳಲ್ಲಿ ಒಂದು. ಇದು ರಾಷ್ಟ್ರೀಯ ಜೀವನದ ಬಹುತೇಕ ವಿಚಾರಗಳನ್ನು ತುಂಡು, ತುಂಡಾಗಿ ಒಡೆದು ಹಾಕಿದೆ. ಆದ್ದರಿಂದ ನಮ್ಮ ಪ್ರಕಾರ 5–10 ವರ್ಷಗಳಲ್ಲಿ ಸಮಾನ ನಾಗರಿಕ ಸಂಹಿತೆಯು ಭಾರತ ಜನರಿಗೆ ದಕ್ಕುವಂತಾಗಬೇಕು. ಯಾವ ರೀತಿ ಎಂದರೆ ಪ್ರಾಥಮಿಕ ಶಿಕ್ಷಣ ಉಚಿತವಾಗಿ ಹಾಗೂ ಕಡ್ಡಾಯ ವಾಗಿ ಹತ್ತು ವರ್ಷಗಳಲ್ಲಿ ಸಿಕ್ಕುವ ರೀತಿಯ ಹಾಗೆ. ಆದ್ದರಿಂದ ನಾವು ಸೂಚಿಸುವುದೇನೆಂದರೆ, ಸಲಹಾ ಸಮಿತಿಯು ಸಮಾನ ನಾಗರಿಕ ಸಂಹಿತೆಗೆ ಸಂಬಂಧಪಟ್ಟ ವಿಧಿಯನ್ನು ಎರಡನೆಯ ಭಾಗದಿಂದ ತೆಗದು 1ನೆಯ ಭಾಗಕ್ಕೆ ಸೂಕ್ತ ಬದಲಾವಣೆಗಳೊಂದಿಗೆ ಸೇರಿಸಬೇಕು."

ಅಲ್ಪ ಸಂಖ್ಯಾತರ ಹಕ್ಕುಗಳು ಹಾಗೂ ಅವರ ಸಾಂಸ್ಕೃತಿಕ ನೆಲೆಗಳ ಅಸ್ತಿತ್ವದ ಹಿನ್ನೆಲೆಯ ಪ್ರಶ್ನೆಗಳಲ್ಲಿ ಸಮಾನ ನಾಗರಿಕ ಸಂಹಿತೆಗಾಗಿ ಇಡಲ್ಪಟ್ಟ ಈ ಬೇಡಿಕೆ ಯನ್ನು ತಳ್ಳಿ ಹಾಕಲಾಯಿತು. ಹೀಗೆ ಸಮಾನ ನಾಗರಿಕ ಸಂಹಿತೆಗಾಗಿ ಬೇಡಿಕೆಯನ್ನು ಇತ್ತಿದ್ದರೂ ಈ ಬೇಡಿಕೆಯ ಹಿನ್ನೆಲೆಯಲ್ಲಿ ಲಿಂಗಾಧಾರಿತ ನ್ಯಾಯದ ಬಗ್ಗೆಗಿನ ಕಾಳಜಿ ಇರಲಿಲ್ಲ. ರಾಷ್ಟ್ರೀಯತೆಯ ಕಲ್ಪನೆ ಹಾಗೂ ರಾಷ್ಟ್ರೀಯ ಐಕ್ಯತೆಯ ಪ್ರಶ್ನೆಗಳ ಹಿನ್ನೆಲೆ ಯಲ್ಲಿಯೇ ಮಹಿಳೆಯರು ಈ ಬೇಡಿಕೆಯನ್ನು ಮುಂದಿಟ್ಟುದು ಕಂಡು ಬರುತ್ತದೆ. ಏನೇ ಆಗಿದ್ದಾಗ್ಯೂ ಸಹ ಈ ಬೇಡಿಕೆಯನ್ನು ಗಮನಕ್ಕೇ ತೆಗೆದುಕೊಳ್ಳಲಿಲ್ಲ.

ಈ ಬೇಡಿಕೆಯನ್ನು ವಿರೋಧಿಸಿದ ಅಂಬೇಡ್ಕರ್ ಹೀಗೆ ಹೇಳುತ್ತಾರೆ : "ಇಲ್ಲಿಯವರೆಗೆ ಮದುವೆ ಹಾಗೂ ವಾರಸುದಾರಿಕೆಗೆ ಸಂಬಂಧಪಟ್ಟಂತೆ ಮಾತ್ರ ನಾಗರಿಕ ಕಾನೂನುಗಳು ಏನೂ ಮಾಡಲು ಕೂಡಾ ಸಾಧ್ಯ ವಾಗಿಲ್ಲ. ಇದಿಷ್ಟು ಬಿಟ್ಟರೆ ಎಲ್ಲದರಲ್ಲಿಯೂ ಸಮಾನ ನಾಗರಿಕ ಸಂಹಿತೆ, ಸಮಾನ ನಾಗರಿಕ ಆ್ಯಕ್ಟ್ ಹಾಗೂ

ಹನ್ನೊಂದು ವಿಚಾರಗಳಲ್ಲಿ ಸಮಾನ ನಾಗರಿಕ ಸಂಹಿತೆಯ ಕೋಡ್ ಇದೆ."

ಈ ಎಲ್ಲಾ ಪರ-ವಿರೋಧಗಳ ಹಿನ್ನೆಲೆಯಲ್ಲಿಯೇ 1948ರಲ್ಲಿ ಒಂದು ರೀತಿಯ ಕೋಮುವಾದದ ಭಾವನೆಯಿಂದಲೇ ಹಿಂದೂ ವೈಯಕ್ತಿಕ ಕಾನೂನುಗಳ ಸುಧಾರಣೆಯನ್ನು ಒಪ್ಪಿಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ಇತರೇ ಧರ್ಮಗಳ ವೈಯಕ್ತಿಕ ಕಾನೂನುಗಳಲ್ಲಿ ಯಾವುದೇ ಸುಧಾರಣೆಯ ಪ್ರಯತ್ನಗಳೂ ನಡೆಯಲಿಲ್ಲ. ಅಲ್ಪ ಸಂಖ್ಯಾತರ ಹಕ್ಕು ಹಾಗೂ ಅವರ ಸಾಂಸ್ಕೃತಿಕ ನೆಲೆಗಳು ಇದರಿಂದ ಅಳಿಸಿಹೋಗಬಹುದು ಎನ್ನುವ ವಾದದ ಹಿನ್ನೆಲೆಯಲ್ಲಿ ಬೇರೆ ಧರ್ಮಗಳ ಸುಧಾರಣೆಯ ಪ್ರಯತ್ನಗಳನ್ನು ಹಾಗೂ ಸಮಾನ ನಾಗರಿಕ ಸಂಹಿತೆಯನ್ನು ಮಂಡಿಸುವ ಪ್ರಯತ್ನವನ್ನೂ ಸಹ ಕೈ ಬಿಡಲಾಯಿತು.

1950ರ ಸಂದರ್ಭದಲ್ಲಿ ನಡೆದ ಹಿಂದೂ ವೈಯಕ್ತಿಕ ಕಾನೂನುಗಳಲ್ಲಿನ ಸುಧಾರಣೆ ಒಂದು ಸಾಮಾಜಿಕ ಕ್ರಾಂತಿಯಾಗಿ ಕಾಣಿಸಿಕೊಂಡದ್ದುಂಟು. ಈ ಸುಧಾರಣೆಗಳಿಂದಾಗಿ ವಿಶೇಷವಾಗಿ ಮದುವೆ, ವಾರಸುದಾರಿಕೆ ಹಾಗೂ ದತ್ತುಗಳಿಗೆ ಸಂಬಂಧಪಟ್ಟಂತೆ ಪುರುಷರು ಹಾಗೂ ಸ್ತ್ರೀಯರ ಮಧ್ಯದ ತಾರತಮ್ಯಗಳು ಕಾಣೆಯಾಗುತ್ತವೆಯೆಂದೂ ಕೂಡಾ ಭಾವಿಸಲಾಗಿತ್ತು. ಹೀಗೆ ಹಿಂದೂ ಧರ್ಮದಲ್ಲಿ ಮಾತ್ರ ಆದ ಬದಲಾವಣೆಗಳಿಂದಾಗಿ ಹಿಂದೂಗಳಲ್ಲಿ–ಅಲ್ಪ ಸಂಖ್ಯಾತರ ಬಗ್ಗೆ–ವಿಶೇಷವಾಗಿ ಮುಸ್ಲಿಂರ ಬಗ್ಗೆ ಬಲವಾದ ಕೋಮು ದ್ವೇಷದ ದಳ್ಳುರಿ ಹತ್ತಿಕೊಳ್ಳಲು ಕಾರಣವಾಯಿತು. ಸಮಾನ ನಾಗರಿಕ ಸಂಹಿತೆ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಕೆಳಗಡೆ ಬರುವುದರಿಂದ ಮೊದಲೇ ಹೇಳಿದಂತೆ ಕಾನೂನಿನ ಮೂಲಕ ಜಾರಿಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೂ ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ಗಳಲ್ಲಿ ಬರುವ ಇತರೇ ವಿಚಾರಗಳಲ್ಲಿ, ಉದಾ ಪಂಚಾಯತ್ ರಾಜ್ಯಕ್ಕೆ ಸಂಬಂಧಪಟ್ಟಂತೆ ಹಲವಾರು ಬದಲಾವಣೆಗಳಾಗಿದ್ದರೂ–ಸಮಾನ ನಾಗರಿಕ ಸಂಹಿತೆಯ ಬಗ್ಗೆ ಮಾತ್ರ ಯಾವುದೇ ಗಮನವನ್ನು ಇಲ್ಲಿಯವರೆಗೂ ಕೊಡಲಾಗಿಲ್ಲ.

ಭಾರತದ ಸಂವಿಧಾನದ 44ನೆಯ ವಿಧಿ ಹೀಗೆ ಹೇಳುತ್ತದೆ. "ಭಾರತದ ಎಲ್ಲೆಡೆ ಸಮಾನ ನಾಗರಿಕ ಸಂಹಿತೆ ಪ್ರತಿಯೊಬ್ಬ ನಾಗರಿಕರಿಗೂ ದೊರಕುವಂತೆ ಮಾಡುವಲ್ಲಿ ರಾಜ್ಯ ಬದ್ಧವಾಗಿರುತ್ತದೆ."

ಈ ಸಮಾನ ನಾಗರಿಕ ಸಂಹಿತೆಯು ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಕೆಳಗೆ ಬಂದುದರಿಂದ ಇಲ್ಲಿಯವರೆಗೂ ಯಾವ ಬದಲಾವಣೆಗಳೂ ಆಗಿಲ್ಲ.

ಈ ನಂತರದಲ್ಲಿ ಸಮಾನ ನಾಗರಿಕ ಸಂಹಿತೆಯ ಬಗ್ಗೆ 1971ರ ಡಿಸೆಂಬರ್‌ನಲ್ಲಿ ಪೂನಾದಲ್ಲಿ ನಡೆದ ಮುಸ್ಲಿಂ ಮಹಿಳಾ ಸಮ್ಮೇಳನದಲ್ಲಿ ಸಮಾನ ನಾಗರಿಕ ಸಂಹಿತೆ ಬೇಕು ಎಂಬ ಈ ಬೇಡಿಕೆಯನ್ನು ಮುಂದಿಟ್ಟು ಸರ್ಕಾರವನ್ನು ಒತ್ತಾಯಿಸಲಾಯಿತು.

1975ರಲ್ಲಿ ಭಾರತ ಮಹಿಳೆಯ ಸ್ಥಾನ-ಮಾನ ಕುರಿತಾದ ಸರ್ಕಾರದ ವರದಿಯಲ್ಲಿಯೂ ಸಹ ಸಮಾನ ನಾಗರಿಕ ಸಂಹಿತೆಯ ಬಗ್ಗೆ ಬೇಡಿಕೆ ಇತ್ತದ್ದು ಕಂಡು ಬರುತ್ತದೆ.

"ವಿಜ್ಞಾನ, ಆಧುನಿಕತೆ ಹಾಗೂ ಜಾತ್ಯಾತೀತತೆಯ ಮೇಲೆ ಒತ್ತು ನೀಡುತ್ತಲೇ ಇಪ್ಪತ್ತೇಳು ವರ್ಷಗಳ ಸ್ವಾತಂತ್ರ್ಯ ನಂತರವೂ ಇಪ್ಪತ್ತನೆಯ ಶತಮಾನದಲ್ಲಿ ಸಮಾನ ನಾಗರಿಕ ಸಂಹಿತೆಯು ಅಸ್ತಿತ್ವದಲ್ಲಿ ಇಲ್ಲದಿರುವುದು ಆಭಾಸಕರ ಹಾಗೂ ಇದನ್ನು ಸಮರ್ಥಿಸಿಕೊಳ್ಳುವುದಕ್ಕೂ ಆಗುವುದಿಲ್ಲ. ಮಹಿಳೆಯರು ಹಾಗೂ ಪುರುಷರ ಮಧ್ಯೆ ತಾರತಮ್ಯಗಳನ್ನು ಎತ್ತಿ ಹಿಡಿಯುವಂತಹ ಹಲವಾರು ವೈಯಕ್ತಿಕ ಕಾನೂನುಗಳ ಅಸ್ತಿತ್ವದ ಮುಂದುವರೆಯುವಿಕೆ ಮೂಲಭೂತ ಹಕ್ಕುಗಳನ್ನು ಚ್ಯುತಿಗೊಳಿಸುವುದಲ್ಲದೇ ಎಲ್ಲಾ ನಾಗರಿಕರಿಗೂ ಸಮಾನತೆಯ ಸ್ಥಾನ–ಮಾನ ನೀಡುತ್ತದೆಯೆಂಬ ಸಂವಿಧಾನದ ಪ್ರಸ್ತಾವನೆಯನ್ನೂ ಚ್ಯುತಿಗೊಳಿಸುತ್ತದೆ ಹಾಗೂ ಇದು ರಾಷ್ಟ್ರೀಯ ಐಕ್ಯತೆಯ, ಜಾತ್ಯಾತೀತ ಸ್ಫೂರ್ತಿಗೂ ಸಹ ವಿರೋಧಿಯಾಗಿದೆ."

ಮಹಿಳಾ ಸಂಘಟನೆಗಳು ಮತ್ತು ಸಮಾನ ನಾಗರಿಕ ಸಂಹಿತೆ

ಹೀಗೆ ಶಾಬಾನೂ ಪ್ರಕರಣಕ್ಕಿಂತ ಮುಂಚೆಯೂ ಸಹ ಸಮಾನ ನಾಗರಿಕ ಸಂಹಿತೆಯ ಪರ/ವಿರೋಧದ ವಾದಗಳು ನಡೆಯುತ್ತಲೇ ಇದ್ದವು. ಆದರೆ ಸಮಾನ ನಾಗರಿಕ ಸಂಹಿತೆ ಬೇಕು/ಬೇಡ ಎನ್ನುವಂತಹ ತೀವ್ರ ಚರ್ಚೆ ಪ್ರಾರಂಭವಾದದ್ದು ಮಾತ್ರ 1985ರ ಏಪ್ರಿಲ್

ನಲ್ಲಿ ಶಾಬಾನೂ ಪ್ರಕರಣದಲ್ಲಿ ಕೊಡಲ್ಪಟ್ಟ ಸುಪ್ರೀಂ ಕೋರ್ಟಿನ ತೀರ್ಪಿನಿಂದಾಗಿ, ಚಾರಿತ್ರಿಕವಾಗಿದ್ದ ಈ ತೀರ್ಪು ವೈಯಕ್ತಿಕವಾಗಿದ್ದ ಕಾನೂನುಗಳ ಬಗ್ಗೆ ಹಲವಾರು ಪ್ರಶ್ನೆಗಳನ್ನೆತ್ತಿ ಸ್ತ್ರೀಯರ ಬದುಕಿನ ನೆಲೆಗಳನ್ನು ಕಾನೂನಿನ ಅಡಿಯಲ್ಲಿ ಪ್ರಶ್ನಿಸುವುದಕ್ಕೆ ಅನುವು ಮಾಡಿಕೊಟ್ಟಿತು. ಮಹಿಳಾ ಚಳವಳಿ 1985ರಲ್ಲಿ ಬಾಂಬೆಯಲ್ಲಿ ಸೇರಿದ್ದ ಸಮಾವೇಶದಲ್ಲಿ ಸಮಾನ ನಾಗರಿಕ ಸಂಹಿತೆಯುನ್ನು ಕುರಿತ ತನ್ನ ವ್ಯವಸ್ಥಿತ ಚರ್ಚೆಯನ್ನೂ ಪ್ರಾರಂಭಿಸಿತು. ಆ ವೇಳೆಗಾಗಲೇ ಸರ್ಕಾರವು ಶಾಬಾನೂ ಪ್ರಕರಣದ ತೀರ್ಪನ್ನು ತಿರುಚಿ ಮುಸ್ಲಿಂ ಮಹಿಳೆಯರನ್ನು ಸೆಕ್ಯೂಲರ್ ಆದ ಜೀವನಾಂಶ ಕಾನೂನುಗಳಿಂದ ಹೊರಗುಳಿಸುವ ಹುನ್ನಾರ ಹೊಂದಿತ್ತು. ಮೂರು ಮಕ್ಕಳ ತಾಯಿಯಾದ ಶಾಬಾನು 1975ರಲ್ಲಿ ತನ್ನ ಗಂಡ ಎರಡನೇ ಮದುವೆಯಾದಾಗ ಆತನಿಂದ ದೂರಸರಿದು ಸಣ್ಣ ಮನೆಯೊಂದರಲ್ಲಿ ವಾಸಿಸತೊಡಗಿದಳು. ಆಕೆಗೆ ತಿಂಗಳಿಗೆ 200ರೂ.ಗಳಂತೆ ಪರಿಹಾರ ಕೊಡುತ್ತಿದ್ದ ಆತ ಎರಡು ವರ್ಷಗಳ ನಂತರ ಅದನ್ನು ನಿಲ್ಲಿಸಿದನು. 1978ರಲ್ಲಿ ಇಂಡೋರಿನ ನ್ಯಾಯಾಲಯದ ಮುಂದೆ ತಿಂಗಳಿಗೆ 500ರೂ.ಗಳ ಜೀವನಾಂಶ ಕೋರಿ ಶಾಬಾನು ಮನವಿ ಮಾಡಿಕೊಂಡಾಗ ಆಕೆಯ ಗಂಡ ಆಕೆಗೆ ವಿವಾಹ ವಿಚ್ಛೇದನ ನೀಡಿ ಮೆಹರ್ ಹಣ 3,000/– ಕೊಟ್ಟು ಕೈತೊಳೆದುಕೊಂಡನು. ಅದೇನೆಯಾದರೂ ಆತ ತಿಂಗಳಿಗೆ 25ರೂ ಪರಿಹಾರ ನೀಡುವಂತೆ ಮ್ಯಾಜಿಸ್ಟ್ರೇಟರು ಆದೇಶಿಸಿದರು. ಜೀವನಾಂಶದ ಮೊತ್ತವನ್ನು ಏರಿಸುವಂತೆ ಕೇಳಿ ಶಾಬಾನು ತನ್ನ ಮನವಿಯನ್ನು ಮಧ್ಯ ಪ್ರದೇಶದ ಹೈಕೋರ್ಟಿಗೆ ಒಯ್ದಾಗ ಅಲ್ಲಿ ಜೀವನಾಂಶದ ಮೊತ್ತವನ್ನು 179.20ಕ್ಕೆ ಏರಿಸಲಾಯಿತು. ಇದನ್ನು ಒಪ್ಪದ ಆಕೆಯ ಗಂಡ ಮುಸ್ಲಿಂ ವೈಯಕ್ತಿಕ ಕಾನೂನು 'ಶರಿಯತ್'ನ ಪ್ರಕಾರ ವಿಚ್ಛೇದಿತ ಪತ್ನಿಗೆ ಯಾವುದೇ ಜೀವನಾಂಶ ಕೊಡಬೇಕಾಗಿಲ್ಲವೆಂದೂ ಆದ್ದರಿಂದ ತನ್ನನ್ನು ಈ ಜೀವನಾಂಶ ನೀಡಿಕೆಯಿಂದ ಮುಕ್ತಗೊಳಿಸಬೇಕೆಂದು ಸುಪ್ರೀಂ ಕೋರ್ಟಿನ ಮೊರೆ ಹೋದನು. ಇದನ್ನು ಪರಿಶೀಲಿಸಿದ ಸುಪ್ರೀಂ ಕೋರ್ಟು ತನ್ನನ್ನು ನೋಡಿಕೊಳ್ಳಲು ಅಶಕ್ತಳಾದ ಮುಸ್ಲಿಂ ವಿಚ್ಛೇದಿತ ಮಹಿಳೆ ಅಪರಾಧ ಪ್ರಕ್ರಿಯಾ ಸಂಹಿತೆ (Criminal produde code)ಯ 125ನೇ ಪರಿಚ್ಛೇದದನ್ವಯ ತನ್ನ ಗಂಡನಿಂದ ಪರಿಹಾರ ಪಡೆಯಲು ಅರ್ಹಳಾಗಿರುತ್ತಾಳೆ ಎಂಬ ತೀರ್ಪನ್ನಿತ್ತು MP ಹೈಕೋರ್ಟು ಶಾಬಾನೂಗೆ ನೀಡಿದ್ದ ಜೀವನಾಂಶ ಪಡೆಯುವ ಹಕ್ಕನ್ನು ಊರ್ಜಿತಗೊಳಿಸಿತು. **ಇದೇ ಶಾಬಾನೂ ಪ್ರಕರಣದ ಸುಪ್ರೀಂ ಕೋರ್ಟಿನ ಚಾರಿತ್ರಿಕ ತೀರ್ಪು.**

ಮುಸ್ಲಿಂ ವೈಯಕ್ತಿಕ ಕಾನೂನಿನಲ್ಲಿ ಕೋರ್ಟು-ಸರಕಾರ ತಲೆ ಹಾಕಬಾರದೆಂದೂ ಮತ್ತು ಸುಪ್ರೀಂ ಕೋರ್ಟಿನ ಈ ತೀರ್ಪನ್ನು ಅನೂರ್ಜಿತಗೊಳಿಸಬೇಕೆಂದೂ ಒತ್ತಾಯಿಸಿ ದೇಶದಾದ್ಯಂತ ಮುಸ್ಲಿಂ ಧಾರ್ಮಿಕ ಸಂಘ-ಸಂಘಟನೆಗಳು ಹರತಾಳ ಪ್ರಾರಂಭಿಸಿದವು. ಈ ಮೂಲಭೂತವಾದೀ ಗುಂಪುಗಳ ಜತೆಗೆಯೇ ಜನತಾ ಪಕ್ಷದ ಜನರಲ್ ಸೆಕ್ರೆಟರಿಯಾಗಿದ್ದ ಸಮದ್ ಶಹಾಬುದ್ದೀನ್, ರಾಜ್ಯ ಸಭೆಯ ಉಪಾಧ್ಯಕ್ಷೆ ನಜ್ಮಾ ಹೆಪ್ತುಲ್ಲಾ ಮತ್ತು ಬೇಗಂ ಅಲೀದ ಅಹಮದ್ ಅವರಂತಹವರು ಕೂಡ ಬಲವಾದ ವಿರೋಧ ವ್ಯಕ್ತಪಡಿಸಿದರು. ಇನ್ನೊಂದು ಕಡೆ ಅನೇಕ ಪ್ರಗತಿಪರ ಮುಸ್ಲಿಂ ಮತ್ತು ಮುಸ್ಲಿಮೇತರ ಗುಂಪುಗಳು ತೀರ್ಪನ್ನು ಸ್ವಾಗತಿಸುತ್ತಾ ಮುಸ್ಲಿಂ ಮಹಿಳೆಯರ ಜೀವನಾಂಶ ಪಡೆಯುವ ಹಕ್ಕನ್ನು ಪ್ರತಿಪಾದಿಸತೊಡಗಿದವು. ತಲಾಖ್ ಮುಕ್ತಿ ಮೋರ್ಚ್ ಎಂಬ ಹೆಸರಿನಲ್ಲಿ ಮಹಿಳೆಯರು ಒಂದಾಗಿ ಮುಸ್ಲಿಂ ಮಹಿಳೆಯರ ಹಕ್ಕಿಗಾಗಿ ಎಲ್ಲೆಲ್ಲೂ ಹೋರಾಟ ಪ್ರಾರಂಭಿಸಿದರು. ಧರ್ಮ ಮಹಿಳೆಯರ ಬದುಕನ್ನು ಅಸಹನೀಯಗೊಳಿಸುತ್ತಿರುವ ಸ್ಥಿತಿಯಿಂದ ಮುಕ್ತಗೊಳಿಸುವಂತಹ **ಸಮಾನ ನಾಗರಿಕ ಸಂಹಿತೆಯೊಂದನ್ನು** ತರಬೇಕೆಂದು ಒತ್ತಾಯಿಸಿ ಪ್ರಧಾನಮಂತ್ರಿ ಮತ್ತು ರಾಷ್ಟ್ರಪತಿಗಳಿಗೆ ಮನವಿ ಒಯ್ದರು. ಈ ಪರ/ವಿರೋಧಗಳ ಹೋರಾಟದ ನಡುವೆಯೇ ಈ ಚರ್ಚೆ ಲೋಕಸಭೆಗೆ ಬಂದಿತು. ಮೂಲಭೂತವಾದಿಗಳನ್ನು ತಣಿಸುವಂತಹ ತನ್ನ ಯಾವತ್ತೂ ಧೋರಣೆಯನ್ನೇ ಇಲ್ಲೂ ತೋರಿದ ರಾಜೀವ್ ಗಾಂಧಿ ಸರ್ಕಾರ ಸುಪ್ರೀಂ ಕೋರ್ಟು ಶಾಬಾನೂಗೆ ಪರಿಹಾರ ಘೋಷಿಸಿರುವ ಸಾಮಾನ್ಯ ಕಾಯಿದೆ ಮುಸಲ್ಮಾನರಿಗೆ ಅನ್ವಯಿಸದಿರುವಂತಹ ಒಂದು ಹೊಸ ಕಾನೂನನ್ನು ತರಲು ಮುಂದಾಯಿತು.

ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಸಹಾಯದಿಂದ ತಯಾರಿಸಲಾದ ಈ ಮಸೂದೆ ಹೀಗೆ ಹೇಳುತ್ತದೆ "ವಿಚ್ಛೇದಿತ ಅಥವಾ ವಿಧವಾ ಮಹಿಳೆಯರನ್ನು ಕಾಪಾಡುವ ಜವಾಬ್ದಾರಿ ಆಕೆಯ ಕುಟುಂಬ, ಅಪ್ಪ, ಅಣ್ಣ ತಮ್ಮಂದಿರ ಮೇಲಿರುತ್ತದೆಯೇ ಹೊರತು ಗಂಡನ ಮೇಲಿರುವುದಿಲ್ಲ. ಮೇಲ್ಕಂಡ ಯಾರೂ ಇರದೇ ಹೋದಾಗ ಸಮುದಾಯ ಆಕೆಯನ್ನು ನೋಡಿಕೊಳ್ಳಬೇಕು. ಇದು ಶರಿಯತ್‌ನ ಅನುಸಾರವಾಗಿರುತ್ತದೆ. ಹೀಗಾಗಿ **ಅಪರಾಧ ಪ್ರಕ್ರಿಯಾ ಸಂಹಿತೆಯ 125ನೇ ಪರಿಚ್ಛೇದ ಮುಸಲ್ಮಾನರಿಗೆ ಅನ್ವಯಿಸುವುದಿಲ್ಲ."** ಈ ಮಸೂದೆಯನ್ನು 1986ರಲ್ಲಿ ಸುಪ್ರೀಂ ಕೋರ್ಟು "ಮುಸ್ಲಿಂ ಹೆಂಗಸರ ರಕ್ಷಣಾ ಮಸೂದೆ" ಎಂಬ ಹೆಸರಿನಲ್ಲಿ ಹೊರತಂದು ಹಿಂದಿನ ತೀರ್ಪನ್ನು ಅನೂರ್ಜಿತಗೊಳಿಸಿತು.

ಇಡೀ ಮುಸ್ಲಿಂ ಸಮುದಾಯದ ಮಹಿಳೆಯರನ್ನೇ ಹಕ್ಕು ಚ್ಯುತಿಗೊಳಿಸುವ ಈ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂದೂ ಮತ್ತು ಎಲ್ಲ ಕೋಮು ಪಂಗಡಗಳ ಮಹಿಳೆಯರಿಗೂ ಅನ್ವಯಿಸುವಂತಹ, ಲಿಂಗ ಸಮಾನತೆಯನ್ನು ಕೋರುವ ಒಂದು **ಸಮಾನ ನಾಗರಿಕ** ಸಂಹಿತೆಯನ್ನು ತರುವಂತೆಯೂ ಒತ್ತಾಯಿಸಿ, ಮಹಿಳಾ ಚಳವಳಿ ದೇಶದಾದ್ಯಂತ ಬಲವಾದ ಹೋರಾಟವನ್ನು ಪ್ರಾರಂಭಿಸಿತು. 1987ರಲ್ಲಿ ಬಾಂಬೆಯಲ್ಲಿ ಮಹಿಳೆ ಧರ್ಮ ಮತ್ತು ಕೌಟುಂಬಿಕ ಕಾನೂನನ್ನು ಕುರಿತಂತೆ ವಿಷ್ಯಾ ಮಟ್ಟದಲ್ಲಿ ನಡೆದ ಸಮಾವೇಶದಲ್ಲಿ ಭಾರತದ ಮಹಿಳಾ ಚಳವಳಿ ಸಮಾನ ನಾಗರೀಕ ಸಂಹಿತೆಯ ಅವಶ್ಯಕತೆಯನ್ನು ತುಂಬಾ ಸ್ಪಷ್ಟವಾಗಿ ಪ್ರತಿಪಾದಿಸಿತು. ಯಾವುದೇ ಧರ್ಮವೂ ಮಹಿಳೆಯರ ಸಮಾನತೆಯನ್ನು ಹೇಳುವದಿಲ್ಲವಾದ್ದರಿಂದ ಎಲ್ಲ ವೈಯಕ್ತಿಕ ಕಾನೂನುಗಳಿಂದಲೂ ಮಹಿಳೆಯರಿಗೆ ಅನ್ಯಾಯವಾಗಿದೆ. ವೈಯಕ್ತಿಕ ಕಾನೂನುಗಳನ್ನು ಖಾಸಗೀಗೊಳಿಸುವುದು ಕೌಟುಂಬಿಕ ಜೀವನ **ಖಾಸಗೀ** ಎಂಬುದರ ಪ್ರತಿಪಾದನೆಯೇ ಆಗುತ್ತದೆ. ಧರ್ಮದ ಹೆಸರಿನಲ್ಲಿ ಮಹಿಳೆಯರ ಬದುಕನ್ನು ಮತ್ತೆ ಮತ್ತೆ 'ಖಾಸಗೀ ವಲಯ'ಕ್ಕೆ ತಳ್ಳುವಂತಹ ಯಾವುದೇ ವ್ಯವಸ್ಥಿತ ಸಂರಚನೆಯನ್ನು ವಿರೋಧಿಸುವುದು ಮಹಿಳಾ ಚಳವಳಿಯ ದೃಷ್ಟಿಯಿಂದ ಬಹಳ ಮುಖ್ಯವಾಗುತ್ತದೆ. ಮಹಿಳೆಯರನ್ನು, ಸಂಪ್ರದಾಯದ ವಾಹಕರು ಪರಂಪರೆಯ, ಮರುಸೃಷ್ಟಿಕರ್ತರು ಎಂದೆಲ್ಲಾ ಹೇಳುತ್ತಾ ಪಿತೃಪ್ರಧಾನ ಮೌಲ್ಯಗಳನ್ನೂ ಬಲಪಡಿಸಲು ಬಳಸಿಕೊಳ್ಳಲು ಬಳಸಿಕೊಳ್ಳುವ ಪ್ರವೃತ್ತಿಯನ್ನು ಪ್ರತಿರೋಧಿಸಬೇಕಾದರೆ ಸ್ತ್ರೀವಾದೀ ಪ್ರವೇಶಿಕೆ ಅತ್ಯಂತ ಅವಶ್ಯಕ ಎಂದು ಭಾರತದ ಮಹಿಳಾ ಚಳವಳಿ ಅಭಿಪ್ರಾಯ ಪಟ್ಟಿತು.

ಇಷ್ಟರ ವೇಳೆಗಾಗಲೇ BJP-RSS-VHP ಕೂಟದ ಸಂಘ ಪರಿವಾರವು ಸಮಾನ ನಾಗರೀಕ ಸಂಹಿತೆಯ ಪರವಾದ ತನ್ನ ಸಿದ್ಧಾಂತ ಮತ್ತು ಒತ್ತಾಯಗಳನ್ನು ಸ್ಪಷ್ಟವಾಗಿ ಹೊರತಂದಿತ್ತು. 1985ರ ಸುಪ್ರೀಂ ಕೋರ್ಟಿನ ಶಾಬಾನೂ ಪ್ರಕರಣದ ತೀರ್ಪನ್ನು ಅದು ಸ್ವಾಗತಿಸಿ ಸಮಾನ ನಾಗರಿಕ ಸಂಹಿತೆಯ ಪರವಾದ ಚರ್ಚೆಗೆ ಆಗಲೇ ಪ್ರವೇಶ ಮಾಡಿತ್ತು. ಒಟ್ಟಾರೆಯಲ್ಲಿ ಈ ಕೋಮುವಾದೀ ಕೂಟದ ಸಮಾನ ನಾಗರಿಕ ಸಂಹಿತೆಯ ಬೇಡಿಕೆಗೂ ಮಹಿಳಾ ಚಳವಳಿಯ ಬೇಡಿಕೆಗೂ ತುಂಬಾ ಸಾಮ್ಯ ಇದ್ದದರಿಂದ ಮಹಿಳಾ ಚಳವಳಿ 'ತನ್ನ ನಿಲುವು ಹೇಗೆ ಭಿನ್ನ' ಎಂಬುದನ್ನು ಸ್ಪಷ್ಟೀಕರಿಸಿಕೊಳ್ಳಬೇಕಾಯಿತು. ಅದೇನೇಯಾದರೂ ಅದು ಬಳಸುವ ಭಾಷೆ ಎಂತದ್ದೇ ಆಗಿರಲಿ ಸಂಘ ಪರಿವಾರದ ಸಮಾನ ನಾಗರಿಕ ಸಂಹಿತೆಯ ಕಲ್ಪನೆ ಒಂದು ಹಿಂದೂರೂಪೀ ಏಕರೂಪತೆಯ ಕಲ್ಪನೆ ಆಗಿತ್ತೇ ಹೊರತು ಲಿಂಗ ಸಮಾನತೆಯಲ್ಲಿಲ್ಲ. ಮಹಿಳಾ ಚಳವಳಿಯ ಕಲ್ಪನೆಯಿದ್ದದ್ದು ಎಲ್ಲ ಸಮುದಾಯದ ಎಲ್ಲ ಸ್ತ್ರೀ–ಪುರುಷರ ನಡುವಿನ ಲಿಂಗ ಸಮಾನತೆಯಲ್ಲಿ. ಇದೇ ನಿಟ್ಟಿನಲ್ಲಿ 1989ರ ವೇಳೆಗೆ ಬಾಂಬೆಯ FAOW ಎನ್ನುವ ಸ್ವಾಯತ್ತ ಮಹಿಳಾ ಗುಂಪು, ಮಹಿಳಾ ಚಳವಳಿ ಬಯಸುವ ಲಿಂಗ ಭೇದವಿರದ ಒಂದು ಸೆಕ್ಯೂಲರ್ ಆದ ಸಮಾನ ನಾಗರಿಕ ಸಂಹಿತೆಯ ಒಂದು ಕರಡನ್ನೇ ತಯಾರಿಸಿತು.

ಕರಡು

ಕೌಟುಂಬಿಕ ಕಾನೂನಿನ ಪರಿಧಿಯಲ್ಲಿ ಬರುವ ವಿವಾಹ, ವಿಚ್ಛೇದನ, ಪರಿಹಾರ, ಆಸ್ತಿ ಹಕ್ಕು, ಮಕ್ಕಳ ರಕ್ಷಣೆಯ ಹಕ್ಕು, ವಾರಸುದಾರಿಕೆ ಮತ್ತು ದತ್ತು ಇವೆಲ್ಲ ನಾಗರಿಕ ಸ್ವರೂಪಿಯಾಗಿವೆ. ಮಹಿಳೆ ಮತ್ತು ಮಕ್ಕಳ ಮೂಲಭೂತ ಹಕ್ಕನ್ನೂ ಚ್ಯುತಿಗೊಳಿಸುವ ಇದನ್ನು ಧರ್ಮದ

ಹಿಡಿತದಿಂದ ತಪ್ಪಿಸಬೇಕು. ಅದಕ್ಕಿರುವ 'ಖಾಸಗೀ' ಆಯಾಮವನ್ನು ತೊಡೆದು ಹಾಕಿ ಒಂದು ಸೆಕ್ಯೂಲರ್ ಆದ ಏಕರೂಪೀ ಲಿಂಗ ಸಮಾನ ಸಂಹಿತೆಯೊಳಕ್ಕೆ ಇವೆಲ್ಲ ಬರುವಂತಾಗಬೇಕು. ಕೌಟುಂಬಿಕ ಕಾನೂನಿನ ಮಿತಿಯೊಳಕ್ಕೆ ಸೇರುವ ಮೇಲಿನ ಎಲ್ಲ ಅಂಶಗಳನ್ನೂ ಕೂಲಂಕುಶವಾಗಿ ಅಂಗೀಕರಿಸುವ ಈ ಕರಡು, ಎಲ್ಲ ವೈಯಕ್ತಿಕ ಕಾನೂನುಗಳೂ ಮತ್ತು ಕ್ರೋಢೀಕರಿಸಲ್ಪಟ್ಟಿರುವ ಹಿಂದೂ ನಾಗರಿಕ ಸಂಹಿತೆಗಳಲ್ಲಿ ಅಡಕವಾಗಿರುವ ಸ್ತ್ರೀವಿರೋಧೀ ಪಿತೃಪ್ರಧಾನ ಮೌಲ್ಯಗಳನ್ನೂ/ಧೋರಣೆಗಳನ್ನೂ ಬಯಲಿಗೆಳೆಯುತ್ತದೆ. ಎಲ್ಲ ಸಮುದಾಯದ ಮಹಿಳೆಯರಿಗೂ ಅನ್ವಯಿಸುವಂತಹ ಲಿಂಗ ಸಮಾನತಾ ಕಾನೂನುಗಳನ್ನು ಪ್ರತಿಯೊಂದು ಅಂಶದ ಸಂಬಂಧದಲ್ಲೂ ಇದು ರೂಪಿಸುತ್ತದೆ. ಈ ಕರಡನ್ನು ಅದೇ ವರ್ಷ ಬಾಂಬೆಯಲ್ಲಿ ನಡೆದ ವೈಯಕ್ತಿಕ ಕಾನೂನುಗಳನ್ನು ಕುರಿತಾದ ರಾಷ್ಟ್ರೀಯ ಸಮಾವೇಶದಲ್ಲಿ ಮಂಡಿಸಲಾಯಿತು. ಈ ವೇಳೆಗಾಗಲೇ ಮಹಿಳಾ ಚಳವಳಿಯಲ್ಲಿ ಸಮಾನ ನಾಗರಿಕ ಸಂಹಿತೆಗೆ ಒಂದು ಒಟ್ಟಾರೆಯಿಂದ ಸಮ್ಮತಿ ಇತ್ತು.

1978ರಿಂದಲೂ ತೀವ್ರ ಅಸಮಾನತೆಯ ಕ್ರಿಶ್ಚಿಯನ್ ವೈಯಕ್ತಿಕ ಕಾನೂನಿನಲ್ಲಿ ಬದಲಾವಣೆಗಾಗಿ ಹೋರಾಡುತ್ತಲೇ ಬಂದಿರುವ JWP ಎನ್ನುವ ಮಹಿಳಾ ಗುಂಪು ಬಿಷಪ್‌ಗಳನ್ನೂ, ಪುರೋಹಿತಶಾಹಿಯನ್ನೂ, ವಕೀಲರನ್ನೂ ಮತ್ತು ಸಾಮಾಜಿಕ ಕಾರ್ಯಕರ್ತರನ್ನು ಒಳಗೊಂಡಿರುವ ಅನೇಕ ಸಭೆ-ಚರ್ಚೆಗಳನ್ನು ನಡೆಸಿದೆ. ಇವೆಲ್ಲದರ ಫಲವೆಂಬಂತೆ 1994ರ ವೇಳೆಗೆ JWP ಕ್ರಿಶ್ಚಿಯನ್ ಮಹಿಳೆಯರಿಗೆ ಸಂಬಂಧಿಸಿದಂತೆ ನ್ಯಾಯಯುತವಾದ ಕೆಲವು ಕಾನೂನುಗಳನ್ನು ರೂಪಿಸಿತು. ವಿವಾಹ, ಆಸ್ತಿ ಹಕ್ಕು, ದತ್ತು ಮತ್ತು ಜೀವನಾಂಶಗಳಿಗೆ ಇವು ಸಂಬಂಧಿಸಿವೆ. ಅದೇ ಸಮಯದಲ್ಲಿ ವೈಯಕ್ತಿಕ ಕಾನೂನುಗಳಿಂದ ಮಹಿಳೆಯರಿಗೆ ಅನ್ಯಾಯವಾಗುತ್ತಿರುವುದರಿಂದ ಒಂದು ಏಕರೂಪೀ ಕಾನೂನು ತರಬೇಕೆಂದು JWP ಒತ್ತಾಯಿಸಿದೆ. JWP ಹೀಗೆ ತಯಾರಿಸಿರುವ ಕ್ರಿಶ್ಚಿಯನ್ ಮಹಿಳೆಯರ ಮಸೂದೆ ಇನ್ನೂ ಪಾರ್ಲಿಮೆಂಟಿನಲ್ಲೇ ಕೊಳೆಯುತ್ತಿದ್ದು ಅನುಷ್ಠಾನಕ್ಕೆ ಕಾಯುತ್ತಿದೆ. ಹೀಗೆ ವೈಯಕ್ತಿಕ ಕಾನೂನಿನೊಳಗಡೆ ಸುಧಾರಣೆಗಾಗಿ ಅನೇಕ ಸೂತ್ರಗಳು ಪ್ರಯತ್ನಿಸುತ್ತಿದ್ದು ಮುಸ್ಲಿಂ ಮಹಿಳೆಯರಿಗೆ ಸಮಾನ ಹಕ್ಕನ್ನು ತರುವಂತಹ ಒಂದು ಆಧುನಿಕ **'ನಿಖಾನಾಮ'**ದ ಕರಡನ್ನು ಕೂಡ ತಯಾರಿಸಲಾಗಿದೆ.

ಈ ಎಲ್ಲ ಗುಂಪು ಪ್ರಯತ್ನಗಳ ಜತೆಗೆಯೇ ಕೆಲವು ಬಿಡಿ ಬಿಡಿ ಪ್ರಯತ್ನಗಳೂ ನಡೆಯುತ್ತಾ ಬಂದಿವೆ. ಮೇರಿ ರಾಯ್, ಲತಾಮಿತ್ತಲ್, ಶಹನಾಜ್ ಶೇಖ್, ವಂದನಾ ಶಿವ, ಹಮೀದಾಬಿ, ಗೀತಾಹರಿಹರನ್ ಮುಂತಾದ ಮಹಿಳೆಯರು ಆಸ್ತಿ ಹಕ್ಕು, ಮಕ್ಕಳ ಪಾಲಸುದಾರಿಕೆ ಮತ್ತು ಪರಿಹಾರಗಳಿಗೆ ಸಂಬಂಧಿಸಿದಂತೆ ತಮ್ಮ ಸಮುದಾಯದ ವೈಯಕ್ತಿಕ ಕಾನೂನು ಹಾಗೂ ಕ್ರೋಢೀಕರಣಗೊಂಡಿರುವ ಹಿಂದೂ ನಾಗರಿಕ ಸಂಹಿತೆಗಳಲ್ಲಿ ಅಡಕವಾಗಿರುವ ಅಸಮಾನತೆಯನ್ನು ಪ್ರಶ್ನಿಸಿ ಹೋರಾಟಕ್ಕಿಳಿದಿದ್ದಾರೆ. ಸಂವಿಧಾನ ಹೇಳುವ ಮೂಲಭೂತ ಹಕ್ಕು ತಮಗೆ ದೊರಕಬೇಕೆಂದು ಒತ್ತಾಯಿಸುತ್ತಿದ್ದಾರೆ.

ಮಹಿಳಾ ಚಳವಳಿಯ ಹೋರಾಟಕ್ಕೆ ಪೂರಕವೆಂಬಂತೆ ಸಮಾನ ಕಾನೂನುಗಳನ್ನು ಒತ್ತಾಯಿಸುವ ಅನೇಕ ಇತರ ಪ್ರಯತ್ನಗಳು ನಡೆದಿದೆ. NLISU, Bar Council of Indiaಗಳು ನಡೆಸಿರುವ ಪ್ರಯತ್ನ ತಜ್ಞ ವಕೀಲರು ಕೈಗೊಂಡ ಪ್ರಯತ್ನವಾಗಿದೆ. ಕೆಲವು ಸೆಕ್ಯೂಲರ್ ಗುಂಪುಗಳಾದ ಸಂಪ್ರದಾಯಕ ವಿರೋಧೀ ಆಂದೋಲನ, Peoples movement for Secularism ಕೂಡ ಮಹಿಳೆಯರಿಗೆ ಸಮಾನ ಕಾನೂನುಗಳು ಸಿಗಬೇಕೆಂದು ಒತ್ತಾಯಿಸಿವೆ.

ಭಾರತ ಸರ್ಕಾರ 1988ರಲ್ಲಿ ಹೊರತಂದ National Perspective Plan for Women ಕೂಡ ಸಮಾನ ನಾಗರಿಕ ಸಂಹಿತೆ ಬೇಕೆನ್ನುವುದನ್ನು ಒತ್ತಿ ಹೇಳುತ್ತದೆ. "....ಒಂದು ಸಮಾನ ನಾಗರಿಕ ಸಂಹಿತೆ ಇರದೇ ಹೋಗಿರುವುದರಿಂದ ಮತ್ತು ಪುರುಷ-ಮಹಿಳೆಯರ ನಡುವಿನ ತಾರತಮ್ಯವನ್ನು ಒಪ್ಪಿಕೊಳ್ಳುವ ವೈಯಕ್ತಿಕ ಕಾನೂನುಗಳನ್ನೇ ಮುಂದುವರೆಸುವುದರಿಂದ ಎಲ್ಲ ನಾಗರೀಕರಿಗೆ ಸಮಾನ ಹಕ್ಕನ್ನು ಎತ್ತಿ ಹಿಡಿಯುವ ಸಂವಿಧಾನದ ಮೂಲಭೂತ ಹಕ್ಕು ಮತ್ತು ಪ್ರಸ್ತಾವನೆಗಳ ಉಲ್ಲಂಘನೆಯಾಗುತ್ತದೆ" ಎಂದು ಹೇಳುತ್ತದೆ. ಅದೇನೆಯಾದರೂ 1990ರಲ್ಲಿ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಿದ್ಯಮಾನ ಪತ್ರಿಕೆಯೂ "ಆಯಾ ಸಮುದಾಯಗಳಿಂದಲೇ ವೈಯಕ್ತಿಕ ಕಾನೂನಿನಲ್ಲಿ ಸುಧಾರಣೆಗೆ ಬೇಡಿಕೆ

ಬರದ ಹೊರತು ಸರ್ಕಾರ ಅದನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ಹೇಳಿ ಕೈತೊಳೆದುಕೊಂಡಿತು. ಅಂತೂ ಮಹಿಳಾ ಚಳವಳಿ ಅನೇಕ ಕಾನೂನುಗಳಲ್ಲಿ ತಿದ್ದುಪಡಿಗಾಗಿ ಸರ್ಕಾರವನ್ನು ಒತ್ತಾಯಿಸಿ ಪಡೆಯಲು ಸಾಧ್ಯವಾಗಿದೆಯಾದರೂ ಕೌಟುಂಬಿಕ ಕಾನೂನುಗಳ ಸಂಬಂಧದಲ್ಲಿ ಅದು ಬೇರೆಯೇ ಆಗಿದೆ. ಎಲ್ಲಿಯವರೆಗೆ ಮಹಿಳೆಯರು ಅತ್ಯಾಚಾರ–ವರದಕ್ಷಿಣೆ ಕಾನೂನುಗಳಲ್ಲಿ ಬದಲಾವಣೆಗೆ ಒತ್ತಾಯಿಸುತ್ತಿದ್ದರೋ, ಶಿಕ್ಷಣಕ್ಕಾಗಿ ಒತ್ತಡ ತರುತ್ತಿದ್ದರೋ ಅಲ್ಲಿಯವರೆಗೂ ಅದು ಪುರುಷರನ್ನು ಇಡಿಯಾಗಿ ಬೆದರಿಸಲಿಲ್ಲ. ಆಸ್ತಿಯಲ್ಲಿ ಸಮಾನ ಪಾಲು, ಮಕ್ಕಳ ವಾರಸುದಾರಿಕೆ ಮುಂತಾದ ಆಯ್ಕೆಯ ತೀರ್ಮಾನ ಕೈಗೊಳ್ಳುವಂತಹ ಅಧಿಕಾರ ಇರುವ ವಿಚಾರಗಳಿಗೆ ಬಂದಾಗ ಪುರುಷರು ತಮ್ಮ ಹಿಡಿತ ಬಿಟ್ಟುಕೊಡಲು ತಯಾರಿಲ್ಲ.

ಸಮಾನ ನಾಗರಿಕ ಸಂಹಿತೆ ಬಗ್ಗೆ ಮಹಿಳಾ ಚಳವಳಿಯೊಳಗಿನ ಮೂರು ನಿಲುವುಗಳು :

ಹಿಂದೆಯೇ ಚರ್ಚಿಸಿರುವಂತೆ 1985ರಿಂದೀಚೆಗೆ ಮಹಿಳಾ ಚಳವಳಿ ಸಮಾನ ನಾಗರಿಕ ಬೇಡಿಕೆಯನ್ನು ತರಲು ಒತ್ತಾಯಿಸಿ ಹೋರಾಡುತ್ತಿರುವಂತೆಯೆ ವೈಯಕ್ತಿಕ ಕಾನೂನುಗಳಲ್ಲಿ ಸುಧಾರಣೆಗೆ ಪ್ರಯತ್ನಿಸುತ್ತಾ ಬಂದಿರುವುದು ಸ್ಪಷ್ಟವಾಗುತ್ತದೆ. ಭಾರತದಂತಹ ಬಹುರೂಪೀ ಸಾಂಸ್ಕೃತಿಕ ನೆಲೆಯುಳ್ಳ ಮತ್ತು ಕೋಮುವಾದೀ ಶಕ್ತಿಗಳು ದಿನೇ ದಿನೇ ಪ್ರಭಲಗೊಳ್ಳುತ್ತಿರುವಂತಹ ದೇಶದಲ್ಲಿನ ಒಟ್ಟಾರೆಯಾದ ಸನ್ನಿವೇಶವನ್ನು ಗಮನದಲ್ಲಿರಿಸಿ ಮಹಿಳಾಚಳವಳಿಯೊಳಗಡೆಯೇ ಸ.ನಾ.ಸ. ಸಂಬಂಧಿಸಿದಂತೆ ಮೂರು ಭಿನ್ನ ದೃಷ್ಟಿಕೋನಗಳು ಬೆಳೆದು ಬಂದಿರುವುದು ಕಂಡು ಬರುತ್ತದೆ. ಮೊದಲನೆಯದು ಎಲ್ಲ ವೈಯಕ್ತಿಕ ಕಾನೂನುಗಳಲ್ಲಿ ಸುಧಾರಣೆಯಾಗಿ ಕ್ರೋಢೀಕರಣವಾಗಬೇಕು. ಎರಡನೆಯದು ಸಮಾನ ನಾಗರಿಕ ಸುಧಾರಣೆಯ ಬದಲಾಗಿ ಒಂದು ಐಚ್ಛಿಕ ನಾಗರಿಕ ಸಂಹಿತೆ ಇರಬೇಕು. ಮೂರನೆಯದು ಎಲ್ಲ ವೈಯಕ್ತಿಕ ಕಾನೂನುಗಳನ್ನೂ ರದ್ದುಗೊಳಿಸಿ ಎಲ್ಲರಿಗೂ ಅನ್ವಯಿಸುವ ಒಂದು ಸಮಾನ ನಾಗರಿಕ ಸಂಹಿತೆ ಬರಬೇಕು.

1) ವೈಯಕ್ತಿಕ ಕಾನೂನುಗಳಲ್ಲಿ ಸುಧಾರಣೆ ಬಯಸುವ ಮೊದಲ ಗುಂಪಿಗೆ ಸೇರಿದ ಅನೇಕ ಮಹಿಳಾ ಸಂಘಟನೆಗಳು ಬದಲಾವಣೆಗಾಗಿ ಸಮುದಾಯದೊಳಗಡೆಯಿಂದಲೇ ಒತ್ತಾಯ ಬರಬೇಕೆಂಬುದನ್ನು ನಂಬುತ್ತವೆ. ಹಾಗೆಯೇ ಪ್ರತಿಯೊಂದು ವೈಯಕ್ತಿಕ ಕಾನೂನುಗಳೂ ಪ್ರತ್ಯೇಕವಾಗಿ ಸುಧಾರಣೆಗೆ ಒಳಪಟ್ಟು ಕ್ರೋಢೀಕರಣಗೊಳ್ಳಬೇಕು. ಇಲ್ಲಿ ಲಿಂಗ ಸಮಾನತೆಯೇ ಕೇಂದ್ರವಾಗಬೇಕು ಎಂದು ಹೇಳುತ್ತವೆ. ಅನೇಕ ಮಹಿಳಾ ಗುಂಪುಗಳು ಇಸ್ಲಾಂ ಮತ್ತು ಕ್ರಿಶ್ಚಿಯನ್ ಸಮುದಾಯದ ಜತೆ ಕೆಲಸ ಮಾಡುತ್ತಾ ವೈಯಕ್ತಿಕ ಕಾನೂನುಗಳಲ್ಲಿ ಸುಧಾರಣೆಯಾಗಬೇಕೆನ್ನುವ ಬಗ್ಗೆ ಆಯಾ ಸಮುದಾಯದ ಒಮ್ಮತಾಭಿಪ್ರಾಯವನ್ನು ಸೃಷ್ಟಿಸಲು ಪ್ರಯತ್ನಿಸುತ್ತವೆ.

2) ಐಚ್ಛಿಕ ಸಮಾನ ನಾಗರಿಕ ಸಂಹಿತೆ ಬೇಕೆನ್ನುವ ದೆಹಲಿಯ ಮಾನುಷಿ ಬೆಂಗಳೂರಿನ ವಿಮೋಚನ ಮತ್ತು ಬಾಂಬೆಯ FAOW (ಇವರು ಇತ್ತೀಚಿನವರೆಗೂ ಸಮಾನ ನಾಗರಿಕ ಸಂಹಿತೆ ಬೇಕೆನ್ನುತ್ತಿದ್ದರು) ನವರು ತಮ್ಮ ವಿಚಾರವನ್ನು ಎರಡು ಮುಖ್ಯ ವಾದಗಳಲ್ಲಿ ಕೇಂದ್ರಿಸುತ್ತಾರೆ. 1) ಭಾರತದಂತಾ ದೇಶದಲ್ಲಿನ ಸಾಂಸ್ಕೃತಿಕ ವೈವಿಧ್ಯತೆಯ ಪ್ರಶ್ನೆ 2) ಕೋಮುಶಕ್ತಿ ಹೊಸ ಹೊಸ ರೆಂಬೆ-ಕೊಂಬೆಗಳೊಂದಿಗೆ ಬೆಳೆಯುತ್ತಿರುವ ಸನ್ನಿವೇಶ.

ಇವರ ಪ್ರಕಾರ, ಲಿಂಗ ಸಮಾನತೆಯನ್ನು ಆಧಾರವಾಗಿಟ್ಟುಕೊಂಡ ಹೊಸ ಕಾನೂನುಗಳು ಜಾರಿಗೆ ಬರಬೇಕು, ಈ ಕಾನೂನುಗಳನ್ನು ಮಾಡುವಾಗ ಇಡಿಯ ನ್ಯಾಯಾಂಗದ ಪ್ರಕ್ರಿಯೆ ಕೂಡ ಬದಲಾಗಬೇಕು. ಯಾವುದೇ ರೀತಿಯ ಕಾನೂನುಗಳನ್ನೂ ಒಂದು ಕೋಮಿನ ಮೇಲೆ ಹೇರಬಾರದು. ಈಗಿನ ಕೋಮು ದಳ್ಳುರಿಯ ವಿಷಯ ಸನ್ನಿವೇಶದಲ್ಲಂತೂ ಹಾಗೆ ಮಾಡಲೇಕೂಡದು. ಸಮಾನ ನಾಗರಿಕ ಸಂಹಿತೆಯ ಬದಲಾಗಿ ಒಂದು ಐಚ್ಛಿಕ (optional) ನಾಗರಿಕ ಸಂಹಿತೆ ಇರಬೇಕು. ಜತೆಗೆಯೇ ಆಯಾ ಧರ್ಮದ ವೈಯಕ್ತಿಕ ಕಾನೂನುಗಳಲ್ಲಿಯೂ ಸುಧಾರಣೆಯಾಗಬೇಕು. ಈ ಸುಧಾರಣೆ ರಾಜ್ಯ ವ್ಯವಸ್ಥೆಯ ಯಾವುದೇ ಒತ್ತಡಕ್ಕೆ ಒಳಪಡದೆ ಆಯಾ ಸಮುದಾಯಗಳೊಳಗಿನಿಂದಲೇ ಆಗಬೇಕು. ಮಹಿಳೆಯರು/

ಪುರುಷರು ಇಷ್ಟಪಟ್ಟಲ್ಲಿ ಐಚ್ಛಿಕ ನಾಗರಿಕ ಸಂಹಿತೆ, ಅಥವಾ ಇಷ್ಟಪಡದಿದ್ದಲ್ಲಿ ತಮ್ಮದೇ ಧರ್ಮದ ವೈಯಕ್ತಿಕ ಕಾನೂನುಗಳಿಂದ ನ್ಯಾಯ ಪಡೆಯುವ ಅವಕಾಶ ಹಾಗೂ ಆಯ್ಕೆಯನ್ನು ಹೊಂದಿರಬೇಕು. ಐಚ್ಛಿಕ ನಾಗರಿಕ ಸಂಹಿತೆ ಎಲ್ಲಿ ಸಾಧ್ಯವೋ ಅಲ್ಲಿ ವೈವಿಧ್ಯತೆಯನ್ನೂ, ಎಲ್ಲಿ ಸಾಧ್ಯವಾಗುವುದಿಲ್ಲವೋ ಅಲ್ಲಿ ಏಕತ್ವವನ್ನು ಹೊಂದಿರಬೇಕು. ಈ ಐಚ್ಛಿಕ ನಾಗರಿಕ ಸಂಹಿತೆ ಲಿಂಗ ಸಮಾನತೆ, ಪ್ರಜಾತಂತ್ರದ ಸ್ಫೂರ್ತಿ ಹಾಗೂ ಭಾಗವಹಿಕೆಯ ತತ್ವದಿಂದ ರೂಪುಗೊಳ್ಳಬೇಕು. ಎಲ್ಲ ಧರ್ಮಗಳ ವೈಯಕ್ತಿಕ ಕಾನೂನುಗಳನ್ನು ಆಧಾರವಾಗಿರಿಸಿ ಲಿಂಗ ಸಮಾನತೆಯನ್ನೇ ಕೇಂದ್ರವಾಗಿಟ್ಟುಕೊಂಡು ಜಾರಿಗೆ ಬರಬೇಕು. (ಈ ನಿಲುವಿಗಿರುವ ವಾದಗಳು ಬೇರೆಯಾದರೂ ಬೇಡಿಕೆ ಮಾತ್ರ ಒಂದೇ).

3) ಸಮಾನ ನಾಗರಿಕ ಸಂಹಿತೆಯೇ ಮಾರ್ಗ ಎನ್ನುವ ದೆಹಲಿಯ 'ಸಹೇಲಿ'ಯಂತಹ ಸಂಘಟನೆ ಪುರುಷರು ಮಹಿಳೆಯರ ಮೇಲೆ ತಮ್ಮ ಹತೋಟಿಯನ್ನು ಇಟ್ಟುಕೊಳ್ಳಲು ಧರ್ಮವನ್ನು ಬಳಸುತ್ತಿರುವುದರಿಂದ ಮತ್ತು ಆಯ್ಕೆ ಎಂಬುದು ಬಹುಪಾಲು ಮಹಿಳೆಯರಿಗೆ ದೂರದ ಮರೀಚಿಕೆಯೇ ಆಗುವುದರಿಂದ ಐಚ್ಛಿಕ ನಾಗರಿಕ ಸಂಹಿತೆಯ ಬೇಡಿಕೆ ಪ್ರಯೋಜನಕಾರಿಯಲ್ಲ. ಹಾಗೆಯೇ ಧರ್ಮ ಆಳುವ ವರ್ಗದ ಸಂಸ್ಥೆಯಾಗಿದ್ದು ಈಗಿರುವ ಕಾನೂನುಗಳಲ್ಲಿ ಸುಧಾರಣೆ ತರುವುದರಿಂದ ಮಹಿಳೆಯರಿಗೆ ಸಮಾನ ಭಾವದ ವೈಯಕ್ತಿಕ ಕಾನೂನು ದೊರೆತಂತಾಗುವುದಿಲ್ಲ. ಇಂದು ಸಮಾನ ನಾಗರಿಕ ಸಂಹಿತೆಯನ್ನು ಅಲ್ಪಸಂಖ್ಯಾತರ ಧಾರ್ಮಿಕ ಮತ್ತು ಸಾಂಸ್ಕೃತಿಕ ಅಸ್ತಿತ್ವವನ್ನು ರಕ್ಷಿಸುವ ಸಮಸ್ಯೆಯಾಗಿ ನೋಡಲಾಗುತ್ತಿದೆ. ಆದರೆ ನಾವದನ್ನು ಲಿಂಗ ಸಮಾನತೆಯ ಪ್ರಶ್ನೆಯಾಗಿ ನೋಡುವುದು ನಮ್ಮ ಚಳವಳಿಯ ದೃಷ್ಟಿಯಿಂದ ಮುಖ್ಯ. ಕೋಮು ಸಂಘರ್ಷ ಮತ್ತು ದೇಶವಿಭಜನೆಯ ಚರಿತ್ರೆಯುಳ್ಳ ದೇಶದಲ್ಲಿ ಸಮಾನ ನಾಗರಿಕ ಸಂಹಿತೆಯ ಪ್ರಶ್ನೆಯನ್ನು ನಿರುದ್ವಿಗ್ನತೆಯಿಂದ ನೋಡಲು ಸಾಧ್ಯವೇ ಇಲ್ಲ. ಇಡೀ ಪ್ರಶ್ನೆ ಅಧಿಕಾರದಾಹೀ ಕೋಮು ಶಕ್ತಿಯ ಕೈಯಲ್ಲಿ ಸಿಕ್ಕಿಕೊಂಡಿರುವುದರಿಂದ ಅಲ್ಪಸಂಖ್ಯಾತರು ಸ. ನಾ. ಸ. ಸಂಹಿತೆ ತಮ್ಮ ಅನನ್ಯತೆಗೊಡ್ಡಿದ ಬೆದರಿಕೆಯೆಂದೇ ಪರಿಗಣಿಸುತ್ತಾರೆ. ಅದೇ ಸಂದರ್ಭದಲ್ಲಿ ವೈಯಕ್ತಿಕ ಕಾನೂನುಗಳ ಸುಧಾರಣೆಯಾಗಲೀ ಸಮಾನ ನಾಗರಿಕ ಸಂಹಿತೆಯನ್ನು ಕಾರ್ಯಶೀಲಗೊಳಿಸುವಲ್ಲಿಯಾಗಲೀ ಸರಕಾರ ಯಾವುದೇ ಆಸಕ್ತಿ ತೋರದಿರುವುದನ್ನು ಬಹುಸಂಖ್ಯಾತ ಹಿಂದೂಗಳು ಅಲ್ಪಸಂಖ್ಯಾತರನ್ನು ತಣಿಸುವ ಸರ್ಕಾರದ ತಂತ್ರವೆಂದೇ ಕಾಣುತ್ತಾರೆ. ಹೀಗಾಗಿ ವೈಯಕ್ತಿಕ ಕಾನೂನುಗಳಿಂದ ಮಹಿಳೆಯರಿಗಾಗುತ್ತಿರುವ ಅನ್ಯಾಯ ಎತ್ತಿ ಹಿಡಿಯಬೇಕಾಗಿದ್ದ ಕಡೆಯಿಂದು ರಾಷ್ಟ್ರೀಯ ಐಕ್ಯತೆ ಮತ್ತು ಅಲ್ಪಸಂಖ್ಯಾತರ ಐಡೆಂಟಿಟಿಯ ಪ್ರಶ್ನೆಯೇ ಕೇಂದ್ರಕ್ಕೆ ಬರುತ್ತಿದೆ. ಸಂಸ್ಕೃತ ಹೀಗಿರುವಾಗ ನಾವು ಏಕರೂಪೀ ನಾಗರಿಕ ಸಂಹಿತೆ (UCC) ಎಂಬ ಹಾದಿ ತಪ್ಪಿಸಬಹುದಾದ ಪ್ರಯೋಗವನ್ನು ಕೈಬಿಟ್ಟು 'ಸಮಾನ ನಾಗರಿಕ ಸಂಹಿತೆ (ECC) ಎಂಬ ಹೆಚ್ಚು ಸೂಕ್ತವಾದ ಪ್ರಯೋಗವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಎಲ್ಲ ಹಿನ್ನೆಲೆಯಲ್ಲಿ ಎಲ್ಲ ವೈಯಕ್ತಿಕ ಕಾನೂನುಗಳನ್ನು ರದ್ದುಗೊಳಿಸಿ ಮಹಿಳೆಯರ ಬದುಕನ್ನು ಸಹನೀಯಗೊಳಿಸುವಂತಹ ಅಂಶಗಳನ್ನು ಎಲ್ಲ ವೈಯಕ್ತಿಕ ಕಾನೂನುಗಳಿಂದಲೂ ಆಯ್ದುಕೊಂಡು ಎಲ್ಲ ಧರ್ಮೀಯರಿಗೂ ಅನ್ವಯಿಸುವಂತಹ ಒಂದು ಸಮಾನ ನಾಗರಿಕ ಸಂಹಿತೆ ಬೇಕು.

ಈ ಮೂರೂ ನಿಲುವುಗಳಲ್ಲಿರುವ ಒಂದೇ ಒಂದು ಸಮಾನ ಅಂಶವೆಂದರೆ ವೈಯಕ್ತಿಕ ಕಾನೂನುಗಳಲ್ಲಿರುವ ತಾರತಮ್ಯ ಹೋಗಲಾಡಿಸಬೇಕೆಂಬುದು. ಅದೇನೇಯಾದರೂ ಮಹಿಳಾ ಚಳವಳಿ ಕಾರ್ಯಶೀಲಗೊಳ್ಳಬೇಕಾದರೆ ಒಂದು ಒಟ್ಟಾರೆಯಾದ ನಿಲುವು ತೆಗೆದುಕೊಳ್ಳುವುದು ಅಗತ್ಯ.

ರಾಜಕೀಯ ಅಸಾರ್ಥಗಳು : ಸಮಾನ ನಾಗರಿಕ ಸಂಹಿತೆ ಮತ್ತು ಅಲ್ಪಸಂಖ್ಯಾತರು, ಬಹುಸಂಖ್ಯಾತರು

ಸಮಾನ ನಾಗರಿಕ ಸಂಹಿತೆಯ ಬಗ್ಗೆ ಸಾರ್ವಜನಿಕ

ವಾಗಿ ಚರ್ಚಿತವಾದಲ್ಲೆಲ್ಲಾ ಇದನ್ನು ಬಹುಸಂಖ್ಯಾತ ಹಾಗೂ ಅಲ್ಪಸಂಖ್ಯಾತರ ಪ್ರಶ್ನೆಯನ್ನಾಗಿಸುವ ಪ್ರಯತ್ನವನ್ನು ನೋಡಬಹುದು. ಸಮಾನ ನಾಗರಿಕ ಸಂಹಿತೆಯನ್ನು ಬಹುಸಂಖ್ಯಾತ ಜನಾಂಗವಾದ ಹಿಂದೂ ಧರ್ಮದವರು ಒಪ್ಪಿಕೊಳ್ಳುತ್ತಾರೆ, ಆದರೆ ಅಲ್ಪಸಂಖ್ಯಾತರಾದ ಮುಸ್ಲಿಂರು ಈ ಸಂಹಿತೆಯ ವಿರೋಧಿಗಳಾಗಿದ್ದಾರೆ ಎಂಬ ಅಭಿಪ್ರಾಯವೂ ಜನಜನಿತವಾಗಿದೆ.

ಹಿಂದೂ ಕಾಯಿದೆಯಲ್ಲಿ ಸ್ತ್ರೀಪರವಾದ, ಪ್ರಗತಿಪರವಾದ ಸುಧಾರಣೆಗಳಾಗಿವೆ. ಸ್ತ್ರೀಯರಿಗೆ ಮೂಲಭೂತ ಹಕ್ಕುಗಳನ್ನು ನೀಡುವುದರ ಮೂಲಕ ಸ್ತ್ರೀಯರನ್ನು ಸಮಾನತೆಯಿಂದ ನೋಡಲಾಗುತ್ತಿದೆಯೆಂದು ಒಂದು ರೀತಿಯಲ್ಲಿ ವ್ಯವಸ್ಥಿತವಾಗಿ ಪ್ರಚಾರಮಾಡಲಾಗುತ್ತಿದೆ. ಹಿಂದೂ ಕಾಯಿದೆಗೆ ಹೋಲಿಸಿದರೆ ಮುಸ್ಲಿಂ ವೈಯಕ್ತಿಕ ಕಾಯಿದೆ ಹಲವಾರು ಶತಮಾನಗಳ ಹಿಂದಿದೆ. ಮುಸ್ಲಿಂ ಕಾನೂನಿನಡಿಯಲ್ಲಿ ಮುಸ್ಲಿಂ ಮಹಿಳೆಯರನ್ನು ಶೋಷಿಸಲಾಗುತ್ತಿದೆಯೆಂದು ಹೇಳುತ್ತಾ ಅವರಲ್ಲಿ ಕಣ್ಣಿಗೆ ರಾಚುವ ಪದ್ಧತಿಗಳಾದ 'ತಲಾಕ್', ಬುರ್ಖಾ, ಹಾಗೂ ಬಹುಪತ್ನಿತ್ವ'ವನ್ನು ನಿದರ್ಶನಗಳನ್ನಾಗಿ ಇಡಲಾಗುತ್ತಿದೆ. ಈ ಎರಡು ವಾದಗಳು ಸತ್ಯಕ್ಕೆ, ವಾಸ್ತವಿಕತೆಗೆ ದೂರವಾಗಿರುವುದನ್ನು ನಾವು ಕಾಣಬಹುದು. ಈ ಎರಡು ವಾದಗಳು ಮತೀಯ ಹಾಗೂ ಪೂರ್ವಗ್ರಹ ಭಾವನೆಗಳಿಂದ ಕೂಡಿದೆಯೆಂಬುದನ್ನು ನಾವು ಗಮನಿಸಬೇಕು.

ಎಲ್ಲಾ ವೈಯಕ್ತಿಕ ಕಾಯಿದೆಯಲ್ಲೂ ಸ್ತ್ರೀಪರವಾದ ಹಾಗೂ ಸ್ತ್ರೀ ವಿರೋಧಿಯಾದ ಅಂಶಗಳು ಅಸ್ತಿತ್ವದಲ್ಲಿ ಇರುವುದನ್ನು ನಾವು ಕಾಣಬಹುದು. ಹಿಂದೂ ಕಾಯಿದೆಯಲ್ಲಿ ಆಸ್ತಿಯಹಕ್ಕು, ತವರುಮನೆಯಲ್ಲಿ ಪರಿತ್ಯಕ್ತ ಮಹಿಳೆಯರಿಗೆ ಇರುವ ಹಕ್ಕು, ವಾರಸುದಾರಿಕೆ, 'ಉಯಿಲು' ಬರೆಯುವ ಸ್ವಾತಂತ್ರ ಮುಂತಾದ ವಿಚಾರದಲ್ಲಿ ಸಂಪೂರ್ಣವಾಗಿ ಸ್ತ್ರೀ ವಿರೋಧಿಯಾಗಿದ್ದು ಅವರಿಗಿರುವ ಮೂಲಭೂತ ಹಕ್ಕುಗಳನ್ನು ನಿರಾಕರಿಸುತ್ತದೆ. ಮುಸ್ಲಿಂ ವೈಯಕ್ತಿಕ ಕಾನೂನಿನಲ್ಲಿ ಪುನರ್‌ವಿವಾಹ, ತಂದೆಯ ಮನೆಯಲ್ಲಿ ಆಸ್ತಿಯ ಹಕ್ಕು, ಉಯಿಲು ಬರೆಯುವ ಹಕ್ಕಿನ ನಿರಾಕರಣೆ ಮುಂತಾದ ವಿಚಾರದಲ್ಲಿ ಸ್ತ್ರೀ ಪರವಾದ ನಿಲುವುಗಳನ್ನು ಕಾಣಬಹುದು. ಬುರ್ಖಾ ಹಾಗೂ ಬಹುಪತ್ನಿತ್ವದ ಬಗ್ಗೆ ಅತಿಶಯವಾದ ತಪ್ಪು ಕಲ್ಪನೆಗಳನ್ನು ನಾವು ಕಾಣಬಹುದು. ಹಿಂದೂ ಧರ್ಮದ ಕಾಯಿದೆಯಲ್ಲಿ ಬಹುಪತ್ನಿತ್ವ ನಿಷೇಧವಾಗಿದ್ದರೂ ಇದು ಬಳಕೆಯಲ್ಲಿರುವುದನ್ನು, ಕಾನೂನಿನಡಿಯಲ್ಲಿ ಇದನ್ನು ಮಾಡುವುದು ತುಂಬಾ ಕಷ್ಟ. ಅಂಕಿ ಅಂಶದ ಪ್ರಕಾರ ಮುಸ್ಲಿಂರಲ್ಲಿ ಬಹುಪತ್ನಿತ್ವ ಜಾರಿಯಲ್ಲಿರುವುದು ಕಡಿಮೆ.

ಇಸ್ಲಾಂ ದೇಶಗಳಲ್ಲೂ ಸಹ ಬಹುಪತ್ನಿತ್ವದ ಕಾನೂನಿನಲ್ಲಿ ಏಕರೂಪತೆ ಇಲ್ಲದಿರುವುದನ್ನು ನಾವು ಕಾಣಬಹುದು. ಅದೇ ರೀತಿಯಲ್ಲಿ ಬುರ್ಖಾ ಹಾಕಿಕೊಳ್ಳುವುದು ಸಹ ಕೆಲವೆಡೆ ಖಡ್ಡಾಯವಾದರೆ, ಕೆಲವೆಡೆ ಖಡ್ಡಾಯವಾಗಿಲ್ಲ. ಬಹುಸಂಖ್ಯಾತರಲ್ಲಿ ಅಲ್ಪಸಂಖ್ಯಾತರ ಬಗ್ಗೆ ಇರುವ ಪೂರ್ವಾಗ್ರಹದಿಂದಾಗಿ ಈ ತರದ ತಪ್ಪು ಕಲ್ಪನೆಗಳು ಪ್ರಚಲಿತದಲ್ಲಿವೆ.

ಹಿಂದೂ ಕಾಯಿದೆಯಲ್ಲಿಯೂ ಸಹ ಪುರುಷರಿಗಿರುವ ಬಾಧ್ಯತೆಗಳನ್ನು ಸ್ತ್ರೀಯರಿಗೆ ನಿರಾಕರಿಸಲಾಗಿದೆ. ಅದೂ ಸಹ ಲಿಂಗ ಪಕ್ಷಪಾತದಿಂದ ಕೂಡಿದೆ. ಇದು ಜಾತ್ಯಾತೀತವಾಗಿಲ್ಲ. ಧರ್ಮದ ಮೂಲವನ್ನು ಹೊಂದಿದ ಈ ಕಾನೂನನ್ನು ಯಾವ ದೃಷ್ಟಿಯಿಂದಲೂ ಮಾದರಿಯಾಗಲು ಸಾಧ್ಯವಿಲ್ಲ. "ಏಕರೂಪ ನಾಗರಿಕ ಸಂಹಿತೆಯ ಹೆಸರಿನಲ್ಲಿ ಈ ಕಾನೂನನ್ನು ಇತರ ಜನಾಂಗದ ಮೇಲೆ ಹೇರುವುದನ್ನು ಸಹಿಸಲು ಸಾಧ್ಯವಿಲ್ಲವೆಂದು" ಪ್ರೊ॥ ತಾಹಿರ್ ಮೊಹಮದ್ ಹೇಳುತ್ತಾರೆ.

ಸಮಾನ ನಾಗರಿಕ ಸಂಹಿತೆಯನ್ನು ಒಪ್ಪಿಕೊಳ್ಳುವ ಹಾಗೂ 'ನಿರಾಕರಿಸುವ' ಎರಡು ಜನಾಂಗದ ಪರಿಕಲ್ಪನೆಗಳು ಲಿಂಗ ಭೇದದಿಂದ ಕೂಡಿದೆ. ಎರಡು ನಿಲುವುಗಳು ಎರಡು ಗುಂಪಿನ ಮತಾಂಧ ಪಿತ್ರಪ್ರಧಾನ ವ್ಯವಸ್ಥೆಯ ಫಲಿತಾಂಶಗಳು. ಇದು ಎಲ್ಲಾ ಧಾರ್ಮಿಕ ನೆಲೆಯನ್ನು ಹೊಂದಿದ ಕಾಯಿದೆಗಳಿಗೂ ಅನ್ವಯವಾಗುತ್ತದೆ.

ಸಮಾನ ನಾಗರಿಕ ಸಂಹಿತೆಯೆಂದರೆ ಲಿಂಗ ಸಮಾನತೆಯನ್ನು ಜಾರಿಗೆ ತರುವ ಪ್ರಯತ್ನವೆಂಬುದನ್ನು ಅಲ್ಪಸಂಖ್ಯಾತರ ಹಾಗೂ ಬಹುಸಂಖ್ಯಾತರ ಪ್ರಶ್ನೆ ಹಾಗೂ ಗೊಂದಲಗಳ ನಡುವೆ ಮರೆಮಾಚಲಾಗುತ್ತಿದೆ. ಅಲ್ಪಸಂಖ್ಯಾತರಿಗೆ ಪ್ರತ್ಯೇಕವಾದ ಕಾನೂನು ಬೇಕಾಗಿದೆಯೇ? ಎಂಬುದು ಬಹುಸಂಖ್ಯಾತರ ಪ್ರಶ್ನೆಯಾದರೆ, ಬಹು ಬಹುಸಂಖ್ಯಾತರ ಕಾನೂನನ್ನು ಅಲ್ಪಸಂಖ್ಯಾತರ ಮೇಲೆ ಹೇರಬೇಕೆ ? ಎಂಬ ಪ್ರಶ್ನೆ ಅಲ್ಪಸಂಖ್ಯಾತರದ್ದು.

ಇತರ ಎಲ್ಲಾ ವೈಯಕ್ತಿಕ ಕಾನೂನಿನಂತೆ ಹಿಂದೂ ಕಾಯಿದೆಯೂ ಸಹ ಲಿಂಗ ಪಕ್ಷಪಾತದಿಂದ ಕೂಡಿದೆ. ಸಮಾನ ನಾಗರಿಕ ಸಂಹಿತೆಯೆಂದರೆ ಹಿಂದೂ ಕಾಯಿದೆಯಲ್ಲ, ಸಮಾನ ನಾಗರಿಕ ಸಂಹಿತೆ ಮುಸ್ಲಿಂ ವಿರೋಧಿಯಲ್ಲ. ಮಹಿಳಾ ಸಂಘಟನೆಗಳು ಹಿಂದೂ ಕಾಯಿದೆಯನ್ನು ಸಮಾನ ನಾಗರಿಕತೆ 'ಮಾದರಿ' ಎಂದು ಪರಿಗಣಿಸುವುದಿಲ್ಲ. ಇದನ್ನು 'ಮಾದರಿ'ಯನ್ನಾಗಿ ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲದಿರುವುದರಿಂದ ನಾಗರಿಕ ಹಿಂದೂ ಕಾಯಿದೆಯನ್ನು ಅಲ್ಪಸಂಖ್ಯಾತರ ಮೇಲೆ ಹೇರುವ ಪ್ರಶ್ನೆಯೂ ಉಂಟಾಗುವುದಿಲ್ಲ.

ಮಹಿಳಾ ಸಂಘಟನೆಗಳು 'ಲಿಂಗ ಸಮಾನತೆಯ ನ್ಯಾಯಕ್ಕಾಗಿ' ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೆ ತರಬೇಕೆಂಬ ತಮ್ಮ ಬೇಡಿಕೆಯನ್ನು, ಬಹುಸಂಖ್ಯಾತರ, ಹಾಗೂ ಅಲ್ಪಸಂಖ್ಯಾತರ ಗೊಂದಲದ ಮುಸುಕಿನಲ್ಲಿ ಕರಗಿ ಹೋಗದಂತೆ ಸ್ಪಷ್ಟವಾಗಿ, ನಿಖರವಾಗಿ ಹೇಳಬೇಕಾಗಿದೆ.

ಸಮಾನ ನಾಗರಿಕ ಸಂಹಿತೆ ಮತ್ತು ಜಾತ್ಯಾತೀತತೆ

ಒಂದು ಜಾತ್ಯಾತೀತ ರಾಷ್ಟ್ರ, ಒಂದು ಧರ್ಮದ ನಂಬಿಕೆ, ಸಂಸ್ಕೃತಿ, ಹಾಗೂ ಜೀವನದ ರೀತಿ-ನೀತಿಯ ಪ್ರಶ್ನೆಯಾದುದರಿಂದ ವೈಯಕ್ತಿಕ ಕಾನೂನಿನಲ್ಲಿ ತಲೆಹಾಕಬಾರದು. ಆದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಮಾತ್ರವಲ್ಲದೆ, ದೇವರಲ್ಲಿ ಇರುವ ನಂಬಿಕೆಯನ್ನು ಅಲುಗಾಡಿಸುತ್ತದೆಯೆಂದು ಮಹಮದ್ ಇಸ್ಮಾಯಿಲ್ ಬಲವಾಗಿ ಪ್ರತಿಪಾದಿಸುತ್ತಾರೆ. 24 ಮತ್ತು 25ನೇ ವಿಧಿಯಲ್ಲಿ ಅಲ್ಪಸಂಖ್ಯಾತರಿಗೆ ನೀಡಲಾದ ಧಾರ್ಮಿಕ ಸ್ವಾತಂತ್ರ್ಯದ ಚ್ಯುತಿಯುಂಟಾಗುತ್ತದೆಯೆಂಬ ಸಂವಿಧಾನಾತ್ಮಕ ತೊಡಕನ್ನು ಮುಂದಿಡುತ್ತಾರೆ. ಹೀಗೆ ನಾಗರಿಕ ಸಂಹಿತೆಗೂ, ಜಾತ್ಯಾತೀತತೆಗೂ ನೇರವಾಗಿ ತಳುಕು ಹಾಕಲಾಗಿದೆ. ಅಲ್ಪಸಂಖ್ಯಾತರು ಇದನ್ನು ಅವರ ರಕ್ಷಣೆಯ ಪ್ರಶ್ನೆಯನ್ನಾಗಿಸುತ್ತಿದ್ದಾರೆ. ಅಲ್ಪಸಂಖ್ಯಾತರಿಗೆ ವೈಯಕ್ತಿಕ ಕಾನೂನುಗಳು ಧರ್ಮ ಸಂಕೇತಗಳಾಗಿವೆ. ಇಂದು ಮುಸ್ಲಿಂರು ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೆ ತರುವಲ್ಲಿ ಎತ್ತುತ್ತಿರುವ ಪ್ರಶ್ನೆಗಳನ್ನು 1956ರಲ್ಲಿ ಹಿಂದೂ ಕಾಯಿದೆ ಕ್ರೋಢೀಕರಣವಾದ ಸಮಯದಲ್ಲಿ ಹಿಂದೂಗಳೂ ಸಹ ಈ ಮಾದರಿಯ ಪ್ರಶ್ನೆಗಳನ್ನು ಎತ್ತಿದ್ದರು. ಬೆಳೆಯುತ್ತಿರುವ ಧರ್ಮ ಪ್ರೇರಣೆಯ ರಾಜಕಾರಣ, ಪ್ರಬಲವಾಗುತ್ತಿರುವ ಮತೀಯ ಶಕ್ತಿಗಳು, ಉಗ್ರವಾದ ಮತಾಂಧತೆ, ಇವು ರಾಜಕೀಯ ಅಧಿಕಾರವನ್ನು ಪಡೆಯುವ ಪ್ರಯತ್ನದ ಹಿನ್ನಲೆಯಲ್ಲಿ ಜಾತ್ಯಾತೀತತೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ವ್ಯಾಖ್ಯಾನಿಸುತ್ತದೆ. ಅಧಿಕಾರಕ್ಕಾಗಿ ಒಂದು ಕೋಮಿನ ಜನರನ್ನು ಸಂತೃಪ್ತಪಡಿಸುವ, ಓಟಿನ ರಾಜಕಾರಣವೂ ಸಹ ಜಾತ್ಯಾತೀತತೆಯನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ವ್ಯಾಖ್ಯಾನಿಸಲಾಗುತ್ತಿದೆ. ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯವೇ ಜಾತ್ಯಾತೀತತೆಯೆಂದು ಒಂದು ಅಂಶವಾದರೆ, ಅಲ್ಪಸಂಖ್ಯಾತರಿಗಿರುವ ಪ್ರತ್ಯೇಕ ಅವಕಾಶವನ್ನು ಅಳಿಸಿ, ಏಕರೂಪತೆಯನ್ನು ತರುವುದು ಜಾತ್ಯಾತೀತತೆಯ ಲಕ್ಷಣವಾಗಿದೆ ಎನ್ನುತ್ತದೆ ಇನ್ನೊಂದು ವಾದ.

"ಧರ್ಮ ಮನುಷ್ಯರ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುವುದಕ್ಕೆ ರಾಜ್ಯ ಅವಕಾಶ ನೀಡಬಾರದು. ವೈಯಕ್ತಿಕ ಕಾನೂನುಗಳು ಧರ್ಮದಿಂದ ಪ್ರತ್ಯೇಕವಾಗಿರಬೇಕೆಂದು ಹೇಳುತ್ತಾರೆ ಡಾ॥ ಬಿ. ಆರ್. ಅಂಬೇಡ್ಕರ್, ಇದು ಅವರ ದೃಷ್ಟಿಯಲ್ಲಿ ಜಾತ್ಯಾತೀತತೆ. ನ್ಯಾಯವಾದಿ ಕೆ. ಎಸ್. ಹೆಗಡೆಯವರು "ಧಾರ್ಮಿಕ ಹಿನ್ನಲೆಯನ್ನು ಹೊಂದಿರುವ ವೈಯಕ್ತಿಕ ಕಾಯಿದೆಗಳು ಮಧ್ಯಕಾಲೀನ ವಾದವುಗಳು" ಎಂದು ಭಾವಿಸುತ್ತಾರೆ. ತೀವ್ರವಾಗಿ ಬೆಳೆಯುತ್ತಿರುವ ಧರ್ಮ ಪುನರುತ್ಥಾನ ರಾಜಕೀಯ ವಾತಾವರಣದಲ್ಲಿ ಮಹಿಳೆಯರ ಶೋಷಣೆಯ ಸ್ವರೂಪ ಸಂಕೀರ್ಣವಾಗುತ್ತಿದೆ. ಮತಾಂಧತೆಯ ಪ್ರಶ್ನೆ ಎದುರಾದಾಗಲೆಲ್ಲಾ ಸ್ತ್ರೀಯರ ಸ್ವಾತಂತ್ರ ಹರಣವನ್ನು ನಾವು ನೋಡಬಹುದಾಗಿದೆ. ಮತೀಯ ಗಲಭೆಗಳು ನಡೆದಾಗ ಒಂದು ಜನಾಂಗದ ಹೆಂಗಸರನ್ನು ಇನ್ನೊಂದು ಜನಾಂಗದ ವೈರಿಗಳೆಂದು ನೋಡಲಾಗುತ್ತದೆ. ಅತ್ಯಾಚಾರ ಲೈಂಗಿಕ ಹಿಂಸೆ, ಮುಂತಾದವುಗಳನ್ನು ನಡೆಸುವುದರಿಂದ ಇನ್ನೊಂದು ಪಂಗಡವನ್ನು ಅವಮಾನ ಮಾಡಬಹುದೆಂದು ಭಾವಿಸಲಾಗುತ್ತಿದೆ. ಹಿಂಸೆಗೊಳಗಾದ ಮಹಿಳೆಯನ್ನು ಅವಳ ಜನಾಂಗದವರೂ ಸ್ವೀಕರಿಸದೆ ಅತಂತ್ರ ಸ್ಥಿತಿಯಲ್ಲಿ ಬದುಕಬೇಕಾಗುತ್ತದೆ. ಉಗ್ರವಾದಿ ಮತೀಯ 'ಶಕ್ತಿಗಳು ಮೂಲಭೂತವಾದಿ ಮತೀಯ ಶಕ್ತಿಗಳು ರಾಜಕೀಯ ಅಧಿಕಾರವನ್ನು ಪಡೆಯುವುದು ಸ್ತ್ರೀಯರ ದೃಷ್ಟಿಯಿಂದ ಅಪಾಯಕಾರಿಯಾದುದು ಎಂಬುದು ವಿಶ್ವರಾಜಕೀಯ

ಬೆಳವಣಿಗೆಯನ್ನು ಗಮನಿಸಿದಾಗ ಕಂಡುಬರುತ್ತದೆ. ಧರ್ಮದ ಹೆಸರಿನಲ್ಲಿ ಸ್ತ್ರೀಯರನ್ನು ಸಂಪೂರ್ಣವಾಗಿ ಸಾರ್ವಜನಿಕ ಜೀವನದಿಂದ ಪ್ರತ್ಯೇಕಿಸುವ, ಅವರನ್ನು ಕೌಟುಂಬಿಕ ಚೌಕಟ್ಟಿಗೆ ಬಂಧಿಸುವ ಪ್ರಯತ್ನಗಳನ್ನೂ ನಾವು ನೋಡಬಹುದು.

ಅಸ್ಕರ್‌ಆಲಿಇಂಜಿನಿಯರ್ ಇದಕ್ಕೆ ಉತ್ತಮ ನಿದರ್ಶನ ಕೊಡುತ್ತಾರೆ. ಇಸ್ಲಾಂ ಧರ್ಮದ ಒಂದು ಪಂಗಡವಾದ ಬೋಹ್ರಾ ಪಂಗಡವು ಸುನ್ನಿ ಮುಸ್ಲಿಂಗಿಂತ ಪ್ರಗತಿಪರವಾದ ಆಚರಣೆಗಳನ್ನು ಪಾಲಿಸಿಕೊಂಡು ಬಂದಿದೆ. ಒಂದು ದಶಕದ ಹಿಂದೆ ಬೋಹ್ರಾ ಪಂಗಡದ ಮಹಿಳೆಯರು ಬುರ್ಖಾ ಹಾಕುವುದರಿಂದ ಮುಕ್ತವಾಗಿದ್ದರು. ಅದು ಖಡ್ಡಾಯ ಪದ್ಧತಿಯಾಗಿರಲಿಲ್ಲ. ಆದರೆ ಮತಾಂಧತೆಯ ಬೆಳವಣಿಗೆಯ ಪರಿಣಾಮವಾಗಿ ಧರ್ಮಗುರುಗಳು ಈ ಪದ್ಧತಿಯನ್ನು ಪುನಃ ಜಾರಿಗ ತರುತ್ತಿದ್ದಾರೆ. ಆಫ್ರಿಕನ್ ದೇಶಗಳಲ್ಲಿ ಸ್ತ್ರೀಯರು ಕಛೇರಿಗಳಲ್ಲಿ ದುಡಿಯುವುದನ್ನು ನಿಷೇಧಿಸಲಾಗುತ್ತಿದೆಯೆಂದು ಅಸ್ಕರ್ ಹೇಳುತ್ತಾರೆ.

ಧರ್ಮ, ಸಮಾಜಿಕ ಸಂಬಂಧದಿಂದ ಪ್ರತ್ಯೇಕವಾಗಿರಬೇಕು. ಇಲ್ಲವಾದರೆ ಅದು ಜನರ ಸಾಮಾಜಿಕ ಸಂಬಂಧದಲ್ಲಿ ತೊಡಕಾಗುತ್ತದೆ. ವೈಯಕ್ತಿಕ ಕಾನೂನಿನಲ್ಲಿ ಬದಲಾವಣೆಯಾದರೆ ಧಾರ್ಮಿಕ ನಂಬಿಕೆಯ ಬುಡವನ್ನು ಅಲುಗಾಡಿಸುತ್ತದೆ ಎಂಬ ವಾದಕ್ಕೆ ಯಾವುದೇ ರೀತಿಯ ಆಧಾರವಿಲ್ಲ. ವೈಯಕ್ತಿಕ ಕಾನೂನುಗಳು ಮಹಿಳೆಯರ ಹಕ್ಕುಬಾಧ್ಯತೆಗಳಿಗೆ ಮಾತ್ರ ಸಂಬಂಧಪಟ್ಟಿವೆಯೆಂಬುದನ್ನು ನಾವು ಗಮನಿಸಬೇಕು. ಇತರ ಕಾಯಿದೆಗಳು ಏಕರೂಪತೆಯನ್ನು ಪಡೆದಾಗ ಅವು ಯಾವುದೇ ಧರ್ಮದ ಬುನಾದಿಯನ್ನು ಅಲುಗಾಡಿಸಲಿಲ್ಲವೆ ?

ಒಂದು ಧರ್ಮದ ಸ್ತ್ರೀಯರ ಸ್ಥಾನಮಾನವೇ ಆ ಧರ್ಮದ ಬುನಾದಿಯೇ ? ಸ್ತ್ರೀಯರು ಒಂದು ಧರ್ಮದ ವಾಹಕರೆ ? ಅವರ ಮೂಲಕ ಮಾತ್ರ ಧರ್ಮದ ಅಳಿವು-ಉಳಿವು ಸಾಧ್ಯವೇ ? ಇವನ್ನು ಅಪೇಕ್ಷೆ ಪಡುವವರು ಯಾರು ? ಪುರುಷರೇ ? ಅಥವಾ ಸ್ತ್ರೀಯರೇ ? ಧರ್ಮ ಹಾಗೂ ಸ್ತ್ರೀಯರನ್ನೂ ಸಮೀಕರಿಸಬಹುದೆ ?

ಸ್ತ್ರೀಯರು ಒಂದು ಧರ್ಮದ ಸಂಕೇತಗಳೇ? ಒಂದು ಧರ್ಮದ ಸಂಪೂರ್ಣ ಅಸ್ತಿತ್ವ ವೈಯಕ್ತಿಕ ಕಾನೂನಿನಲ್ಲಿ ಅಡಗಿದೆಯೇ ? ವೈಯಕ್ತಿಕ ಕಾನೂನಿನ ಜಾಗದಲ್ಲಿ ನಾಗರಿಕ ಸಂಹಿತೆಯನ್ನು ಜಾರಿಗೆ ತಂದರೆ ಒಂದು ಧರ್ಮದ ಅಸ್ತಿತ್ವಕ್ಕೆ ಹೇಗೆ ಧಕ್ಕೆಯಾಗುತ್ತದೆ? ದಶಗಳಿಂದಲೂ ಏಳುತ್ತಿರುವ ಗೊಂದಲಗಳಲ್ಲಿ ಸ್ತ್ರೀಯರ ಹಿತಾಸಕ್ತಿಯನ್ನು ಬಲಿಕೊಡುವ ಹುನ್ನಾರ ಹಾಗೂ ಚಾಣಾಕ್ಷತನವನ್ನು ನಾವು ಕಾಣಬಹುದೆ ? ಧಾರ್ಮಿಕ ಪಿತೃಪ್ರಧಾನ ಶಕ್ತಿಗಳು ಸಂಘಟಿತವಾಗುತ್ತಿವೆ ? ಈ ಪ್ರಶ್ನೆಗಳನ್ನು ಮಹಿಳಾ ಸಂಘಟನೆಗಳು ಕೇಳಿಕೊಳ್ಳುವುದರ ಜೊತೆಗೆ ನಿಖರವಾದ ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ.

ಸಮಾನ ನಾಗರಿಕ ಸಂಹಿತೆ ಮತ್ತು ರಾಷ್ಟ್ರೀಯ ಐಕ್ಯತೆ, ವೈಶಿಷ್ಟತೆಯ ಪ್ರಶ್ನೆ

ನ್ಯಾಯವಾದಿ ಕುಲದೀಪ್‌ಸಿಂಗ್ 1995 ಮೇ 10ರಂದು ನೀಡಿದ ತೀರ್ಪಿನೊಂದಿಗೆ ಸಮಾನ ನಾಗರಿಕತೆಯ ಸಂಹಿತೆಯ ರಾಷ್ಟ್ರೀಯ ಐಕ್ಯತೆಯನ್ನು ಬಲಗೊಳಿಸುವುದೆಂದೂ ಅಲ್ಪಸಂಖ್ಯಾತರು ಎರಡು ರಾಷ್ಟ್ರ ಪರಿಕಲ್ಪನೆಗೆ ವಿದಾಯ ಹೇಳಿ, ಏಕರೂಪ ನಾಗರಿಕ ಸಂಹಿತೆಯನ್ನು ಒಪ್ಪಿಕೊಳ್ಳಬೇಕೆಂದು ಹೇಳುವುದರ ಜೊತೆಗೆ ಹಿಂದೂಗಳು ರಾಷ್ಟ್ರೀಯ ಐಕ್ಯತೆಗಾಗಿ, ಕಾನೂನಿನಲ್ಲಿ ಬದಲಾವಣೆಗೆ ಒಪ್ಪಿಕೊಂಡು, ತ್ಯಾಗಮಾಡಿದ್ದಾರೆಂದು ಹೇಳುತ್ತಾ, ಸಮಾನ ನಾಗರಿಕ ಸಂಹಿತೆಗೂ, ರಾಷ್ಟ್ರೀಯ ಐಕ್ಯತೆಯ ಪರಿಕಲ್ಪನೆಗೂ ತಳಕು ಹಾಕಿದ್ದಾರೆ. ವಿಚ್ಛೇದನೆ ನೀಡದೆ, ವಿವಾಹವಾಗುವ ಉದ್ದೇಶದಿಂದ ಮತಾಂತರಗೊಳ್ಳುವ ಕ್ರಿಯೆ ಕ್ರಿಮಿನಲ್ ಅಪರಾಧವೆಂಬ ಮಹತ್ವವಾದ ಸ್ತ್ರೀ ಪರವಾದ ತೀರ್ಪು, ರಾಷ್ಟ್ರೀಯ ಐಕ್ಯತೆಯ ಪ್ರಶ್ನೆಯ ಗೊಂದಲದಲ್ಲಿ ಕಳೆದು ಹೋಗುವ ಸಾಧ್ಯತೆಯೇ ಹೆಚ್ಚು.

ರಾಷ್ಟ್ರೀಯ ಐಕ್ಯತೆ ನಮ್ಮ ಸಮಾಜದಲ್ಲಿ ಈಗಾಗಲೇ ಇವೆ ಎಂದು ಈ ವಾದ ಭಾವಿಸುತ್ತದೆ. ಬಹುಸಂಖ್ಯಾತ ಜನರಲ್ಲೇ ಇರುವ ಜಾತಿಪದ್ಧತಿ, ಭಾಷೆ ಮುಂತಾದವುಗಳ ಹಿನ್ನೆಲೆಯಲ್ಲಿ ರಾಷ್ಟ್ರೀಯ ಐಕ್ಯತೆ ಇದೆಯೆನ್ನಬಹುದೆ? ಮುಸ್ಲಿಂರು ಮಾತ್ರ ಏಕರೂಪ ನಾಗರಿಕ ಸಂಹಿತೆಯನ್ನು ವಿರೋಧಿಸುವುದರ ಮೂಲಕ ರಾಷ್ಟ್ರೀಯ ಐಕ್ಯತೆಯ ವಿರೋಧಿಗಳಾಗಿದ್ದಾರೆಂದು ಹೇಳಲಾಗುತ್ತದೆಯೇ ? ಮುಸ್ಲಿಂರಲ್ಲಿ ದೇಶಾಭಿಮಾನದ ಕೊರತೆಯಿದೆಯೆಂದು

ಭಾವಿಸಲಾಗುತ್ತದೆ. ಭಿನ್ನತೆಗೂ ಪ್ರತ್ಯೇಕತೆಗೂ ಇರುವ ಅಂತರವನ್ನು ನಾವು ಗಮನಿಸಬೇಕಾಗುತ್ತದೆ.

"ಏಕರೂಪ ನಾಗರಿಕ" ಸಂಹಿತೆ ಜನಾಂಗಗಳಲ್ಲಿ ಪ್ರಚಲಿತವಿರುವ ವೈಶಿಷ್ಟ್ಯತೆ ಹಾಗೂ ವೈವಿಧ್ಯತೆಯನ್ನು ನಾಶಪಡಿಸುತ್ತದೆ. ಇದು ಬಹುರೂಪಿ ಸಂಸ್ಕೃತಿಯ ವಿನಾಶಕ್ಕೆ ನಾಂದಿಯಾಗುತ್ತದೆಯೆಂದು ಇದನ್ನು ವಿರೋಧಿಸುವ ವಾದವನ್ನು ಸಹ ವ್ಯಕ್ತಪಡಿಸಲಾಗುತ್ತದೆ. ವೈವಿಧ್ಯತೆಯು ಜಾತ್ಯಾತೀತತೆಯ ಸಂಕೇತವೆಂದು ಭಾವಿಸಲಾಗುತ್ತಿದೆ. ಮಹಿಳೆಯರನ್ನು ಒಂದು ಜನಾಂಗದ ವೈಶಿಷ್ಟ್ಯತೆಯ ಸಂಕೇತವೆಂದು ಸಹ ನೋಡಲಾಗುತ್ತದೆ. ಒಂದು ಜನಾಂಗದ ಧರ್ಮವನ್ನು, ಇನ್ನೊಂದಕ್ಕೆ ಹೋಲಿಸುವಾಗ ಸ್ತ್ರೀಯರ ಹಿನ್ನಲೆಯೇ ವ್ಯಾಖ್ಯಾನಿಸಲಾಗುತ್ತದೆ. ಶಾಬಾನು ಕೇಸ್‌ನಲ್ಲಿ ಸ್ತ್ರೀಯರ ಹಕ್ಕು ಬಾಧ್ಯತೆಗಳನ್ನು ಒಂದು ಜನಾಂಗದ ಅಸ್ತಿತ್ವಕ್ಕಾಗಿ, ಬಹುಸಂಖ್ಯಾತರಿಗಿಂತ ಭಿನ್ನವಾಗಿರುವ, ಪ್ರತ್ಯೇಕವಾಗಿರುವ ಉದ್ದೇಶಕ್ಕಾಗಿಯೇ ಬಿಟ್ಟುಕೊಡಲಾಯಿತು. ರೂಪಾಕನ್ವರ್ ಕೇಸ್‌ನಲ್ಲಿ ಸಹ ರಜಪೂತ್ ಜನಾಂಗದ ವೈಶಿಷ್ಟ್ಯತೆಯ, ಅಸ್ತಿತ್ವದ ಉಳಿವಿಗಾಗಿ ಸ್ತ್ರೀಯರ ಹಿತಾಸಕ್ತಿಯನ್ನು ಬಿಟ್ಟುಕೊಡಲಾಯಿತು.

"ಏಕರೂಪತೆಯನ್ನು ಮುಸ್ಲಿಂರು ಸ್ವಾತಂತ್ರಪೂರ್ವದಿಂದಲೂ ವಿರೋಧಿಸಿಕೊಂಡು ಬಂದಿದ್ದಾರೆ. ಬ್ರಿಟೀಷರ ಸುಧಾರಣಾ ನೀತಿ, ಇಂಗ್ಲೀಷ್ ವಿದ್ಯಾಭ್ಯಾಸ ಮುಸ್ಲಿಂ ಜನಾಂಗದ ವೈಶಿಷ್ಟ್ಯತೆಯನ್ನು ನಾಶಪಡಿಸುತ್ತದೆಯೆಂದು ಮುಸ್ಲಿಂರು ಬಲವಾಗಿ ನಂಬಿದ್ದರು. ಈ ಕಾರಣದಿಂದಲೇ ಏಕರೂಪ ಶಿಕ್ಷಣ ಪದ್ಧತಿಯನ್ನು ವಿರೋಧಿಸಿ 'ಮದರಸಾ' ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದರು. ಆದರೆ ಇಂದು ಅರ್ಥಕಳೆದುಕೊಂಡ ಶಿಕ್ಷಣ ವ್ಯವಸ್ಥೆಯಾಗಿ, ಬಹುಪಾಲು ಮುಸ್ಲಿಂರು ಸಾಮಾನ್ಯ ಶಿಕ್ಷಣ ವ್ಯವಸ್ಥೆಯ ವಲಯದಲ್ಲಿ ಸೇರಿಹೋಗಿದ್ದಾರೆ. ಈ ಬದಲಾವಣೆ ಅವರ ಧರ್ಮಕ್ಕೆ ಯಾವ ಸ್ವರೂಪದ ಚ್ಯುತಿಯನ್ನು ತಂದಿದೆ? ಅವರ ವೈಶಿಷ್ಟ್ಯತೆ ಹೇಗೆ ಕುಂದುಂಟಾಗಿದೆ ? ಈ ಸಾಧ್ಯತೆ ಇಲ್ಲಿ ಹೆಚ್ಚು ಕಂಡುಬರುವುದಿಲ್ಲವೆ ? ಈ ಬದಲಾವಣೆಯನ್ನು ಒಪ್ಪಿಕೊಳ್ಳುವ ಮುಸ್ಲಿಂರು ಮಹಿಳೆಯರಿಗೆ ಸಂಬಂಧಪಟ್ಟ ವಿಚಾರಗಳಿಗೆ ಧರ್ಮ, ಮತ್ತು ವೈಶಿಷ್ಟ್ಯತೆಯ ಅರ್ಥ ನೀಡುತ್ತಾರೆ. ವೈಯಕ್ತಿಕ ಕಾನೂನಿನಲ್ಲಿರುವ ಸ್ತ್ರೀ ವಿರೋಧಿ ನಿಲುವುಗಳು, ಸ್ತ್ರೀಯರ ಹಿತಾಸಕ್ತಿಯನ್ನು ಬಲಿಕೊಡುವ ಅಂಶಗಳು ಇಂದು ಒಂದು ಧರ್ಮದ, ಜನಾಂಗದ ವೈಶಿಷ್ಟ್ಯತೆಯ, ಅಸ್ತಿತ್ವದ ಸಂಕೇತಗಳಾಗಿ ತೋರುತ್ತಿರುವುದು ವಿಪರ್ಯಾಸವೇ ಸರಿ. ಇದು ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೆ ತಂದರೆ, ವೈವಿಧ್ಯತೆ ನಾಶವಾಗುತ್ತಿದೆಯೆಂಬ ಕಾರಣದಿಂದ, ಸಮಾನ ನಾಗರಿಕ ಸಂಹಿತೆಯನ್ನು ವಿರೋಧಿಸುವ ಎಲ್ಲಾ ವಾದಗಳಿಗೂ ಅನ್ವಯವಾಗುತ್ತದೆ. ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೆ ತಂದ ಕೂಡಲೇ ನಮ್ಮ ದೇಶದಲ್ಲಿರುವ ಪ್ರಚಲಿತದಲ್ಲಿರುವ ವೈವಿಧ್ಯತೆ ಒಂದು ಕ್ಷಣದಲ್ಲಿ ಮಾಯವಾಗಿ ಒಂದು ರೀತಿ ರಷ್ಯಾ ಮಾದರಿಯ ಸಮಾಜ ನಿರ್ಮಾಣವಾಗುತ್ತದೆಯೆಂದು ಸಹ ಭಾವಿಸಲಾಗುತ್ತಿದೆ.

ಒಂದು ಜನಾಂಗದ ವೈವಿಧ್ಯತೆ, ವೈಯಕ್ತಿಕ ಕಾನೂನಿನಲ್ಲಿ ಮಾತ್ರ ಅಡಗಿದೆಯೇ ? ಇತರ ಕ್ಷೇತ್ರಗಳಲ್ಲಿ ಏಕರೂಪತೆಯನ್ನು ಒಪ್ಪಿಕೊಂಡಾಗ ಈ ಪ್ರಶ್ನೆಗಳು ಇಷ್ಟು ತೀವ್ರಸ್ವರೂಪದಲ್ಲಿ ವ್ಯಕ್ತವಾಗಲಿಲ್ಲವೇಕೆ ?

ಮಾನಸ ದೃಷ್ಟಿಯಲ್ಲಿ ಸಮಾನ ನಾಗರಿಕ ಸಂಹಿತೆ ಹೇಗಿರಬೇಕು ?

'ಸಮಾನ ನಾಗರಿಕ ಸಂಹಿತೆ'–ಎಂದರೆ ಹಿಂದೂ ಕಾನೂನುಗಳಲ್ಲ ಎಂಬುದು ಸ್ಪಷ್ಟವಾಗಿರಬೇಕು. ಎಲ್ಲಾ ವೈಯಕ್ತಿಕ ಕಾನೂನುಗಳಲ್ಲಿಯೂ ಮಹಿಳೆಯರಿಗೆ ಪರವಾಗಿರುವ/ವಿರೋಧವಾಗಿರುವ ವಿಚಾರಗಳಿವೆ. ಹಿಂದೂ ವೈಯಕ್ತಿಕ ಕಾನೂನು ಮಹಿಳೆಯರಿಗೆ ತವರು ಮನೆಯಲ್ಲಿನ-ಮನೆಯಲ್ಲಿರುವ ಬಗ್ಗೆ, ಹಕ್ಕಿನ ಬಗ್ಗೆ ನೀಡುವ ಸೌಲಭ್ಯಕ್ಕಿಂತ ಶರಿಯತ್ ನೀಡುವ ಹಕ್ಕು ಹೆಂಗಸರಿಗೆ ಹೆಚ್ಚು ಪೂರಕವಾಗಿದೆ. ಎರಡನೆಯ ಮದುವೆ ವಿಚಾರದಲ್ಲಿ ಮುಸ್ಲಿಂ ಜನಾಂಗದಲ್ಲಿ ಮಹಿಳೆಯರು ಸ್ವೀಕೃತವಾದಷ್ಟು ಸುಲಭವಾಗಿ ಹಿಂದೂ ಮಹಿಳೆಯರು ಸ್ವೀಕೃತವಾಗುವುದಿಲ್ಲ. ಮುಸ್ಲಿಂರಿಗೆ ಮದುವೆ ಒಪ್ಪಂದವಾದರೆ ಹಿಂದೂಗಳಿಗೆ ಮದುವೆ ಒಂದು ಪವಿತ್ರ ಬಂಧನವಾಗುತ್ತದೆ. ಹೀಗಾಗಿಯೇ ಮೊದಲನೇ ಮದುವೆ ಮುರಿದು ಹೋದರೆ ಹಿಂದೂ ಮಹಿಳೆ ಅನುಭವಿಸುವ ಕಷ್ಟ–ಕಾರ್ಪಣ್ಯಗಳು ಹೆಚ್ಚು. ಹಿಂದೂ ಮಹಿಳೆಯರಿಗೆ ಹೋಲಿಸಿದಾಗ ಈ ವಿಚಾರದಲ್ಲಿ ಮುಸ್ಲಿಂ ಮಹಿಳೆಯರಿಗೆ ಇರುವ ಸೌಲಭ್ಯಗಳು ಹೆಚ್ಚು.

ಶರಿಯತ್ ಎಂದರೆ ತಲಾಖ್-ಪುರುಷರ ಹಲವಾರು ಮದುವೆಗೆ ಕೊಡುವ ವೈಯಕ್ತಿಕ ಕಾನೂನಷ್ಟೇ ಅಲ್ಲ. ಇದನ್ನು ಹೊರತಾಗಿ ಇರುವ ಆಸ್ತಿ, ಮದುವೆಯ ವಿಚಾರದಲ್ಲಿ ಶರಿಯತ್ ಕಾನೂನುಗಳು ಹೆಂಗಸರಿಗೆ ಪೂರಕವಾಗಿವೆ. 'ಸಮಾನ ನಾಗರಿಕ ಸಂಹಿತೆ'-ಬೇಕು ಎನ್ನುವಲ್ಲಿ ಹೆಂಗಸರಿಗೆ ಪೂರಕವಾಗಿರುವ ಕಾನೂನುಗಳು ಯಾವುದೇ ಧರ್ಮದಲ್ಲಿದ್ದರೂ ಅವು ಈ ಸಂಹಿತೆಯ ಭಾಗವಾಗಬೇಕು. ಲಿಂಗಾಧಾರಿತ ಸಮಾನತೆ-ಇದರ ವಿಷನ್ ಆಗಿರಬೇಕು. ಯಾವುದೇ ಕೋಮಿನ ವೈಯಕ್ತಿಕತೆಗಳಿಗೆ ಇಲ್ಲಿ ಅವಕಾಶ ಕೊಡಬಾರದು.

1. ಐಚ್ಛಿಕ ನಾಗರಿಕ ಸಂಹಿತೆಯು ಕಾರ್ಯರೂಪಕ್ಕಿಳಿಯುವ ಕ್ರಿಯೆ ಕಷ್ಟ ಸಾಧ್ಯ. ಇದು ಸರಳವಾದಂತದ್ದಲ್ಲ. ಸ್ತ್ರೀವಾದ ಎತ್ತುವ ಪ್ರಶ್ನೆಗಳು ಸಮಾಜದಲ್ಲಿ ಅಷ್ಟು ಸುಲಭವಾಗಿ ಸ್ವೀಕೃತವಾಗುವುದಿಲ್ಲ. ಹಾಗಾಗಿ ಐಚ್ಛಿಕ ನಾಗರಿಕ ಸಂಹಿತೆಯು ಲಿಂಗಾಧಾರಿತ ಸಮಾನತೆಯನ್ನು ತರುವುದರಲ್ಲಿ ಮುಖ್ಯ ಪಾತ್ರ ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ.
2. ವೈವಿಧ್ಯತೆ, ಸಾಂಸ್ಕೃತಿಕ ನೆಲೆಯ ಪ್ರಶ್ನೆಗಳಿಗೆ ವೈಯಕ್ತಿಕ ಕಾನೂನುಗಳು ಮಾತ್ರ ಆಧಾರವಾಗಬೇಕಿಲ್ಲ. ಈ ರೀತಿ ವಾದಿಸುವುದರಿಂದ ವೈಯಕ್ತಿಕ ಕಾನೂನು ಅಂದರೆ ಕುಟುಂಟ, ಕುಟುಂಬ ಅಂದರೆ ಮಹಿಳೆ, ಮಹಿಳೆ-ಎಂದರೆ ಸಂಸ್ಕೃತಿ ಎಂದ ಹಾಗೆ ಆಗುತ್ತದೆ. ಅಂದರೆ ಮಹಿಳೆಯನ್ನು ನಾವು ಸಂಸ್ಕೃತಿ ಹಾಗೂ ವೈವಿಧ್ಯತೆಯ ಚಿಹ್ನೆಯಾಗಿ ಇಟ್ಟುಕೊಳ್ಳಬಯಸುತ್ತೇವೆ. ಸಾಂಸ್ಕೃತಿಕ ವೈವಿಧ್ಯತೆ ಭಿನ್ನತೆಯ ಪ್ರಶ್ನೆಗಳನ್ನು ಭಾಷೆ, ಆಹಾರ, ಉಡುಗೆ, ತೊಡುಗೆ, ಧಾರ್ಮಿಕ ವಿಧಿ ವಿಧಾನ ಇಂತಹ ವಿಶಾಲವಾದ ಚೌಕಟ್ಟಿನಲ್ಲಿ ನಿರ್ಧರಿಸಬೇಕಾಗುತ್ತದೆ. ಹಾಗಾಗಿ ಸಮಾನ ನಾಗರಿಕ ಸಂಹಿತೆ ಅಲ್ಪಸಂಖ್ಯಾತರ ವೈವಿಧ್ಯತೆ, ಸಂಸ್ಕೃತಿಯನ್ನು ನಾಶ ಮಾಡುತ್ತದೆ ಎಂಬ ವಾದ ಹುರುಳಿಲ್ಲದ್ದಾಗುತ್ತದೆ.
3. ಸಮಾನ ನಾಗರಿಕ ಸಂಹಿತೆಯ ಬೇಡಿಕೆಯಿಂದಾಗಿ ಸರ್ಕಾರ, ರಾಜ್ಯಗಳಿಗೆ ಸಂಪೂರ್ಣ ಅಧಿಕಾರವನ್ನು ಕೊಡುತ್ತೇವೆ ಎಂಬ ಪ್ರಶ್ನೆಯನ್ನು ಕೆಲವರು ಎತ್ತಿರುತ್ತಾರೆ. ಸಮಾನ ನಾಗರಿಕ ಸಂಹಿತೆ ಅಸ್ತಿತ್ವಕ್ಕೆ ಬಂದಾಗಲೂ ಎಲ್ಲಾ ಸರಿಹೋಗಿ, ಎಲ್ಲೆಲ್ಲಿಯೂ ಲಿಂಗಾಧಾರಿತ ಸಮಾನತೆ ಒಂದು ಬಿಡುತ್ತದೆ ಎನ್ನುವ ಗ್ರಹಿಕೆ ರೊಮ್ಯಾಂಟಿಕ್ ಆಗಿರುವಂತಹದು. ವರದಕ್ಷಿಣೆ, ಅತ್ಯಾಚಾರ, ಇತರ ಕಾನೂನುಗಳಲ್ಲಿ ನಾವು ಬದಲಾವಣೆ ಅಪೇಕ್ಷಿಸಿದ್ದೇವೆ, ಪಡೆದಿದ್ದೇವೆ. ಈ ಕಾನೂನುಗಳು ಒಂದು ಆಶಾಧ್ವನಿಯಾಗಬಹುದು ಅಷ್ಟೇ. ಅಗತ್ಯವೆನಿಸಿದಾಗ ರಾಜ್ಯದ ಅಧಿಕಾರದ ವಿರುದ್ಧ ಮತ್ತೆ ಮಹಿಳೆಯರು ಒಟ್ಟಾಗಿ ಹೋರಾಡಬೇಕಾಗುತ್ತದೆ.
4. ಧರ್ಮವನ್ನು ನಾವು ವಿಶಾಲವಾದ ಅರ್ಥದಲ್ಲಿಯೇ ನೋಡಬೇಕಾಗುತ್ತದೆ. ವೈಯಕ್ತಿಕ ಕಾನೂನುಗಳೇ ಧರ್ಮ ಎನ್ನುವುದರಿಂದ ಲಿಂಗಾಧಾರಿತ ಅಸಮಾನತೆ ಮುಂದುವರಿದುಕೊಂಡು ಹೋಗಲು ಬಳಸುವ ತಂತ್ರವಷ್ಟೇ. ಹಾಗಾಗಿ ಬದುಕಿಗೆ ಅಗತ್ಯವಾಗಿರುವ ಧರ್ಮವನ್ನು ಬೇರೆಯಾದ ರೀತಿಯಲ್ಲಿಯೇ ಅರ್ಥೈಸಬೇಕಾಗುತ್ತದೆ.
5. ಸ್ತ್ರೀವಾದ ಇಲ್ಲಿಯವರೆಗೆ ವೈಯಕ್ತಿಕ ಹಂತದ ಪ್ರಶ್ನೆಗಳನ್ನು ಗಟ್ಟಿಯಾಗಿ ಧ್ವನಿಸುತ್ತಲೇ ಬರುತ್ತಿದೆ. Personal is political ಎಂಬುದು ಇಲ್ಲಿಯವರೆಗೆ ಸ್ತ್ರೀವಾದ ಎತ್ತಿದ ಮುಖ್ಯ ಪ್ರಶ್ನೆಗಳಲ್ಲಿ ಒಂದು. ಆಯಾ ಧರ್ಮದ ವೈಯಕ್ತಿಕ ಕಾನೂನುಗಳಲ್ಲಿ ಸುಧಾರಣೆಗೊಳಿಸುವ ಹಂತದ ಜೊತೆಗೆ ಐಚ್ಛಿಕ ನಾಗರಿಕ ಸಂಹಿತೆ ಬೇಕು ಎನ್ನುವುದೂ ಕೂಡ ಮಹಿಳೆಯರ ಬದುಕನ್ನು ಇನ್ನಷ್ಟು ಖಾಸಗಿಗೊಳಿಸುವುದೇ ಆಗಿರುತ್ತದೆ. ಖಾಸಗೀತನದಲ್ಲಿ ನಡೆಯುವ ಶೋಷಣೆಯನ್ನು ಗುರುತಿಸುವುದು/ಹೋರಾಡುವುದು ಕಷ್ಟಕರವಾದ್ದರಿಂದ ಸಮಾನ ನಾಗರಿಕ ಸಂಹಿತೆ ಬೇಕು.
6. ಇಂದು ಲಿಂಗಾಧಾರಿತ ಸಮಾನತೆ ಬೇಕೆಂದರೆ ಸಮಾನ ನಾಗರಿಕ ಸಂಹಿತೆ ಬೇಕು.
7. ಧರ್ಮ-ಪುರುಷರು ಮಹಿಳೆಯರ ಮೇಲೆಹೊಂದಿರುವ ನಿಯಂತ್ರಣವನ್ನು ನ್ಯಾಯಯುತಗೊಳಿಸುವುದರಿಂದ ಸಮಾನ ನಾಗರಿಕ ಸಂಹಿತೆ ಬೇಕು.
8. 'ಆಯ್ಕೆ' ಎನ್ನುವುದು ಇಂದಿನ ಪಿತೃಪ್ರಧಾನ ವ್ಯವಸ್ಥೆಯಲ್ಲಿ ತುಂಬಾ ಕಷ್ಟಕರವಾಗಿ ಕಾಣುತ್ತವೆ. ಹಾಗಾಗಿ ಐಚ್ಛಿಕ ನಾಗರಿಕ ಸಂಹಿತೆಗಿಂತ ಮುಖ್ಯವಾಗಿ ಸಮಾನ ನಾಗರಿಕ ಸಂಹಿತೆ ಬೇಕು ಎನ್ನುವುದು ಮಾನಸದ ವಾದ.

ಕೌಟುಂಬಿಕ ಕಾನೂನುಗಳು ಮತ್ತು ಅವುಗಳಲ್ಲಡಗಿರುವ ಸ್ತ್ರೀ ವಿರೋಧೀ ಅಂಶಗಳು

ಭಾರತದಲ್ಲಿ ವಿವಿಧ ಧಾರ್ಮಿಕ ಸಮುದಾಯಗಳ ಕೌಟುಂಬಿಕ ವಿದ್ಯಮಾನಗಳಿಗೆ ಅನ್ವಯವಾಗುವ ಕಾನೂನುಗಳ ಒಂದು ಸಂಕ್ಷಿಪ್ತ ನೋಟ ಇಲ್ಲಿದೆ. ಮಹಿಳೆಯರನ್ನು ಸಮಾನ ಅವಕಾಶದಿಂದ ವಂಚಿಸುವ ಈ ಕಾನೂನುಗಳ ಧೋರಣೆಯನ್ನು ಇಲ್ಲಿ ಗಮನಿಸಬಹುದಾಗಿದೆ.

ವಿವಾಹ

ಹಿಂದೂ ಕಾನೂನು : 1955ರಲ್ಲಿ ಹಿಂದೂ ವಿವಾಹ ಕಾಯಿದೆಯನ್ನು ತರುವುದಕ್ಕೆ ಮೊದಲು ಹಿಂದೂ ಪುರುಷರು ಇಚ್ಛಾನುಸಾರ ಬಹುಪತ್ನೀತ್ವವನ್ನು ಹೊಂದಿರಬಹುದಾಗಿತ್ತು ಮತ್ತು ಹಿಂದೂ ಸ್ತ್ರೀಯರು ಕಟ್ಟುನಿಟ್ಟಾಗಿ ಏಕಪತೀತ್ವವನ್ನು ಪಾಲಿಸಬೇಕಾಗಿತ್ತು. 1955ರ ಹಿಂದೂ ವಿವಾಹ ಕಾಯಿದೆಯು ಪುರುಷ ಮತ್ತು ಸ್ತ್ರೀಯರಿಬ್ಬರಿಗೂ ಏಕಪತ್ನಿ–ಪತಿತ್ವವನ್ನೇ ಖಡ್ಡಾಯಗೊಳಿಸಿತು. ಹಿಂದೂ ವಿವಾಹ ಕಾಯಿದೆಯನ್ವಯ ಮದುವೆಯ ವಯಸ್ಸು ಹುಡುಗನಿಗೆ 21 ಮತ್ತು ಹುಡುಗಿಗೆ 18. ಈ ಕಾಯಿದೆಯ 9ನೇ ಪರಿಚ್ಛೇದವು ವೈವಾಹಿಕ ಹಕ್ಕುಗಳ ಪುನಸ್ಸ್ವಾಧೀನಕ್ಕೆ ಅವಕಾಶ ಕೊಡುತ್ತದೆ ಮತ್ತು ಇದನ್ನು ಸಾಮಾನ್ಯವಾಗಿ ಗಂಡಂದಿರೇ ಜೀವನಾಂಶ ಕೊಡುವುದರಿಂದ ತಪ್ಪಿಸಿಕೊಳ್ಳಲು ಬಳಸಿಕೊಳ್ಳುತ್ತಾರೆ.

ಇಸ್ಲಾಮೀ ಕಾನೂನು : ಮಹಿಳೆಯರು ಖಡ್ಡಾಯವಾಗಿ ಏಕಪತೀತ್ವವನ್ನು ಪಾಲಿಸಬೇಕು. ಆದರೆ ಪುರುಷರಿಗೆ ಬಹುಪತ್ನೀತ್ವಕ್ಕೆ ಅವಕಾಶವಿದೆ. ಉದಾಹರಣೆಗೆ ಕೆಲ ಸಂದರ್ಭಗಳಲ್ಲಿ ಒಬ್ಬ ಮುಸ್ಲಿಂ ಗಂಡಸು ಏಕಕಾಲಕ್ಕೆ ನಾಲ್ವರು ಪತ್ನಿಯರನ್ನು ಹೊಂದಬಹುದಾಗಿದೆ.

ಕ್ರಿಶ್ಚಿಯನ್ ಕಾನೂನು : ಪುರುಷ ಮತ್ತು ಮಹಿಳೆಯರಿಬ್ಬರೂ ಏಕಪತ್ನಿ - ಪತಿತ್ವ ಪಾಲಿಸಬೇಕು.

ಪಾರ್ಸಿ : ಪುರುಷ ಮತ್ತು ಮಹಿಳೆಯರಿಬ್ಬರೂ ಏಕಪತ್ನಿ-ಪತಿತ್ವ ಪಾಲಿಸಬೇಕು.

ವಿಚ್ಛೇದನ

ಹಿಂದೂ ಕಾನೂನು : 1955ರ ಹಿಂದೂ ವಿವಾಹ ಕಾಯಿದೆ ಬರುವವರೆಗೂ ಹಿಂದೂ ವಿವಾಹವು ಕಡಿಯಲಾರದ ಬಂಧನವಾಗಿದ್ದಿತು. ಈ ಕಾಯಿದೆ ಬಂದ ನಂತರ ಗಂಡ ಮತ್ತು ಹೆಂಡತಿ ಇಬ್ಬರೂ ಒಂದೇ ಬಗೆಯ ಕಾರಣಗಳಿಗೆ ವಿಚ್ಛೇದನ ಪಡೆಯುವ ಅವಕಾಶವಿದೆ. ಹಿಂದೂ ಪತ್ನಿಗೆ ವಿಚ್ಛೇದನ ಕೋರುವ ಇನ್ನೂ ನಾಲ್ಕು ಹೆಚ್ಚಿಗೆ ಕಾರಣಗಳು ಲಭ್ಯವಿವೆ. ಪರಸ್ಪರರ ಒಪ್ಪಿಗೆ ವಿಚ್ಛೇದನಕ್ಕೆ ಅವಶ್ಯ. ಕ್ರೌರ್ಯವನ್ನು ವಿಚ್ಛೇದನಕ್ಕೆ ಕಾರಣವಾಗಿ ಬಳಸಬಹುದಾದರೂ ಇಲ್ಲಿ ಮಾನಸಿಕ ಹಿಂಸೆಯನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿಲ್ಲ.

ಇಸ್ಲಾಮಿ ಕಾನೂನು : 1939ರ ಮುಸ್ಲಿಂ ವಿವಾಹ ವಿಚ್ಛೇದನಾ ಕಾಯಿದೆಯನ್ವಯದ ನೆಲೆಗಳಿಂದ ಮುಸ್ಲಿಂ ಮಹಿಳೆಯರು ವಿಚ್ಛೇದನ ಪಡೆಯಬಹುದಾಗಿದೆ. ಪುರುಷರಿಗೆ ಕಾನೂನು ಹೊರಗಡೆ, ಏಕಪಕ್ಷೀಯವಾಗಿ ವಿಚ್ಛೇದನೆ ಪಡೆಕೊಳ್ಳುವ ಅವಕಾಶವಿದೆ. ಇದರಲ್ಲಿ ಎರಡು ರೀತಿ ಇದೆ : ಒಪ್ಪಿತ ಮತ್ತು ಒಪ್ಪಿತವಲ್ಲದವು. ಒಂದೇ ಸಲಕ್ಕೆ ಮೂರು ಬಾರಿ ತಲಾಕ್ ಹೇಳುವುದು ಒಪ್ಪಿತವಲ್ಲದ್ದು. ಆದರೆ ಭಾರತದಲ್ಲಿ ಸಾಮಾನ್ಯವಾಗಿಯೇ ಇದು ಆಚರಣೆಯಲ್ಲಿದೆ. ಹನಾಫೀ ಕಾನೂನು ಸಾಕ್ಷಿಗಳಿಲ್ಲದೆಯೇ ಉಚ್ಚರಿಸಲ್ಪಟ್ಟ, ಕುಡಿದ ಮತ್ತಿನಲ್ಲಿ ಅಥವಾ ಕೋಪೋದ್ರಿಕ್ತ ಸ್ಥಿತಿಯಲ್ಲಿ ಇಲ್ಲವೇ ಹುಡುಗಾಟಕ್ಕೆ ಉಚ್ಚರಿಸಿದ ವಿಚ್ಛೇದನವನ್ನು ಅಂಗೀಕರಿಸುತ್ತದೆ. ಷಿಯಾ ಕಾನೂನು ಇಬ್ಬರು ಸಾಕ್ಷಿಗಳ ಸಮ್ಮುಖದಲ್ಲಿ ಮೌಖಿಕ ವಿಚ್ಛೇದನ ನೀಡಬಹುದೆನ್ನುತ್ತದೆ.

ಒಬ್ಬ ಮುಸ್ಲಿಂ ಮಹಿಳೆ ತನಗೆ ವಿಚ್ಛೇದನದ ಹಕ್ಕನ್ನು

ಕೊಡುವಂತಹ ತಲಾಖ್-ಇ ತಫ್‌ವಿದ್ ಮತ್ತು ಖುಲ್‌ಗಳಿಂದ ವಂಚಿತಳಾಗಿದ್ದಾಳೆ.

ಕ್ರಿಶ್ಚಿಯನ್ : ಭಾರತೀಯ ವಿಚ್ಛೇದನಾ ಕಾಯಿದೆ-1969 ರನ್ವಯ ಕ್ರಿಶ್ಚಿಯನ್ ಗಂಡಸು ವಿಚ್ಛೇದನ ಪಡೆಯಬಹುದು. ಆದರೆ ಮಹಿಳೆ ಗಂಡನ ವ್ಯಭಿಚಾರದ ಜತೆಗೆ ಇನ್ನೊಂದು ತಪ್ಪನ್ನು ತೋರಿಸಲೇಬೇಕು. ಉದಾ : ದ್ವಿಪತ್ನಿತ್ವ, ಸಗೋತ್ರ ಸಂಬಂಧ, ಅತ್ಯಾಚಾರ, ಕ್ರೌರ್ಯ, ತನ್ನನ್ನು ನಿರ್ಗತಿಕಳನ್ನಾಗಿಸಿರುವುದು, ಮತಾಂತರ, ಸಲಿಂಗರತಿ ಇತ್ಯಾದಿ. ಹೆಂಡತಿಯ ವ್ಯಭಿಚಾರದಿಂದ ತನಗಾದ ಅನ್ಯಾಯಕ್ಕಾಗಿ ತಕ್ಕ ಪ್ರತಿಫಲ ಪಡೆಯುವ ಹಕ್ಕು ಗಂಡನಿಗೆ ಮಾತ್ರ ಇರುತ್ತದೆ.

ಪಾರ್ಸಿ : 1936ರ ಪಾರ್ಸಿ ವಿವಾಹ ಮತ್ತು ವಿಚ್ಛೇದನ ಕಾಯಿದೆಯನ್ವಯ, ಗಂಡ ಮತ್ತು ಹೆಂಡತಿಯರಿಬ್ಬರೂ ಒಂದು ಬಗೆಯ ಕಾರಣಗಳಿಗೆ ವಿಚ್ಛೇದನ ಪಡೆಯುವ ಅವಕಾಶವಿದೆ. ಮಹಿಳೆಗೆ ಇನ್ನೊಂದೇ ಒಂದು ಹೆಚ್ಚಿನ ಅವಕಾಶವಿದೆ. ತನ್ನ ಗಂಡ ತನ್ನನು ವೇಶ್ಯಾವೃತ್ತಿಗೆ ಒತ್ತಾಯಿಸುತ್ತಿದ್ದರೆ ಆಕೆ ಆ ಕಾರಣ ಆಧಾರದಲ್ಲಿ ವಿಚ್ಛೇದನ ಪಡೆಯಬಹುದು. ವಿಚ್ಛೇದನಕ್ಕೆ ಪರಸ್ಪರರ ಒಪ್ಪಿಗೆ ಅವಶ್ಯಕ.

ಜೀವನಾಂಶ

ಹಿಂದೂ : ಹಿಂದೂ ಕಾಯಿದೆಯ ಸುಧಾರಣೆಗೆ ಮುನ್ನ ಹಿಂದೂ ಮಹಿಳೆಯರು ಅವಿಭಕ್ತ ಕುಟುಂಬದ ಆಸ್ತಿಯಿಂದ ಜೀವನಾಂಶ ಪಡೆಯಬಹುದಾಗಿತ್ತು. 1946ರ ಹಿಂದೂ ಮಹಿಳೆಯರ ಪ್ರತ್ಯೇಕ ವಸತಿ ಮತ್ತು ಜೀವನಾಂಶ ಕಾಯಿದೆಯನ್ವಯ, ಬಹುಪತ್ನಿತ್ವ ಪಾಲಿಸಿಕೊಂಡಿರುವ ಗಂಡಸಿನ ಯಾವುದೇ ಪತ್ನಿಯು ಪ್ರತ್ಯೇಕ ವಸತಿ ಮತ್ತು ಜೀವನಾಂಶ ಪಡೆಯಬಹುದಾಗಿದೆ. 1955ರ ಹಿಂದೂ ವಿವಾಹ ಕಾಯಿದೆಯು ಪತಿ-ಪತ್ನಿಯರಿಬ್ಬರೂ ಜೀವನಾಂಶ ನೀಡುವ-ಪಡೆಯುವ ಜವಾಬ್ದಾರಿ-ಹಕ್ಕು ಪಡೆದಿರುತ್ತಾರೆ. ಜೀವನಾಂಶ ಪಡೆಯುತ್ತಿರುವ ವ್ಯಕ್ತಿ ಮತ್ತೊಂದು ವಿವಾಹದಲ್ಲಿ ಇಲ್ಲವೇ ಮತ್ತೊಂದು ವ್ಯಕ್ತಿಯೊಡನೆ ಸಂಬಂಧ ಬೆಳೆಸುವಲ್ಲಿ ಇದು ತಂತಾನೇ ಕೊನೆಗೊಳ್ಳುತ್ತದೆ. 1956ರ ಹಿಂದೂ ದತ್ತಕ ಮತ್ತು ಜೀವನಾಂಶ ಕಾಯಿದೆಯನ್ವಯ, ಕೆಲ ಸಂದರ್ಭಗಳಲ್ಲಿ ಹಿಂದೂ ಪತ್ನಿಯು ವಿಚ್ಛೇದಿತ ಗಂಡನಿಂದ ಜೀವನಾಂಶ ಪಡೆಯಲು ಅರ್ಹಳಾಗಿರುತ್ತಾಳೆ. ಆದರೆ ಆಕೆ ಪರಿಶುದ್ಧಳಾಗಿ ಉಳಿಯಬೇಕು. ಹಿಂದೂ ಪುರುಷ ಮತ್ತು ಮಹಿಳೆಯರಿಬ್ಬರೂ ತಮ್ಮ ವಯಸ್ಸಾದ ತಂದೆ-ತಾಯಿಗಳನ್ನು ಮತ್ತು ಮಕ್ಕಳನ್ನು ನೋಡಿಕೊಳ್ಳಬೇಕು. ಒಬ್ಬ ಹಿಂದೂವಲ್ಲದ ಪತ್ನಿ ತನ್ನ ಹಿಂದೂ ಪತಿಯಿಂದ ಜೀವನಾಂಶ ಪಡೆಯುವಂತಿಲ್ಲ.

ಇಸ್ಲಾಂ ಕಾನೂನು : ಇಸ್ಲಾಂ ಕಾನೂನಿನಡಿ, ವಿಚ್ಛೇದನಾ ನಂತರದ ಮೂರು ತಿಂಗಳು ಇಲ್ಲವೇ **ಇದ್ದತ್** ಸಮಯದಲ್ಲಿ ಮಾತ್ರ ಪತಿಯು ಪತ್ನಿಗೆ ಪರಿಹಾರ ನೀಡಬೇಕು. ಆದರೆ ವಿಚ್ಛೇದಿತ ಮುಸ್ಲಿಂ ಮಹಿಳೆ ಕುರಾನಿನನ್ವಯ ಜೀವನಾಂಶ (alimony) ಮೆಹರ್ ಮತ್ತು ಮಕ್ಕಳ ಪಾಲನೆಗಾಗಿ ಹಣ ಸಹಾಯ ಪಡೆಯುವ ಎಲ್ಲ ಹಕ್ಕು ಇದೆ. ಭಾರತದಲ್ಲಿ ಇದು ಸಾಧ್ಯವಿಲ್ಲ ಏಕೆಂದರೆ ಆಕೆ ಹಿಂದೂ ವಿವಾಹ ಕಾಯಿದೆಯ ಹೊರಗಡೆ ಬರುತ್ತಾರೆ. ಹೀಗಾಗಿ ಆಕೆ ತನ್ನ ತಂದೆ-ತಾಯಂದಿರಿಂದ ಇಲ್ಲವೇ ವಕ್ಫ್ ಬೋರ್ಡಿನಿಂದ ಮಾತ್ರ ಪರಿಹಾರ ಕೇಳಬಹುದು.

ಕ್ರಿಶ್ಚಿಯನ್ ಕಾನೂನು : ಭಾರತೀಯ ವಿಚ್ಛೇದನಾ ಕಾಯಿದೆ ಕೆಲ ಸಂದರ್ಭಗಳಲ್ಲಿ ಹೆಂಡತಿ ಪರಿಹಾರ ಕೇಳಬಹುದು ಎಂದು ಹೇಳುತ್ತದೆ. ಗಂಡನ ಆಸ್ತಿಯ 1/5 ಭಾಗಕ್ಕಿಂತ ಹೆಚ್ಚನ್ನು ಪರಿಹಾರವಾಗಿ ಸೂಚಿಸುವ ಹಕ್ಕು ಕೋರ್ಟಿಗಿಲ್ಲ. ಇದರ ಜತೆಗೆ, ಗಂಡ ತನ್ನ ಹೆಂಡತಿಯ ವ್ಯಭಿಚಾರ ಕಾರಣಕ್ಕೆ ವಿಚ್ಛೇದನ ಪಡೆದಿದ್ದರೆ ಮತ್ತು ಹೆಂಡತಿಗೆ ಕೊಂಚ ಆಸ್ತಿ ಇದ್ದದ್ದೇ ಆದರೆ ಆ ಆಸ್ತಿಯನ್ನು ಆಕೆಯ ಗಂಡ ಮತ್ತು ಮಕ್ಕಳಿಗೆ ಸೇರುವಂತೆ ಮಾಡುವ ಹಕ್ಕು ಕೋರ್ಟಿನದು.

ಪಾರ್ಸಿ ಕಾನೂನು : ಜೀವನಾಂಶ ಪಡೆಯುವ ಹಕ್ಕು ವಿಚ್ಛೇದಿತ, ಹೆಂಡತಿಗಿದೆ. ಆದರೆ ಅದು ಗಂಡನ ಆಸ್ತಿಯ 1/5 ಭಾಗವನ್ನು ಮೀರುವಂತಿಲ್ಲ. ಮಹಿಳೆ ಪುನರ್ವಿವಾಹವಾದರೆ ಅಥವಾ ಬೇರೆ ಸಂಬಂಧ ಬೆಳೆಸಿದರೆ ಈ ಜೀವನಾಂಶ ಕೊನೆಗೊಳ್ಳುತ್ತದೆ.

ಆಸ್ತಿ ಹಕ್ಕು : 1956ರ ಹಿಂದೂ ಉತ್ತರಾಧಿಕಾರ

ಕಾಯಿದೆ ಬರುವ ಮುಂಚೆ ಹಿಂದೂ ಮಹಿಳೆಯರಿಗೆ ಆಸ್ತಿ ಹಕ್ಕು ತೀರಾ ಕಮ್ಮಿ ಇತ್ತು. ಕೇವಲ ಸ್ತ್ರೀ ಧನದ ಮೇಲಷ್ಟೇ ಅವರ ಹಕ್ಕಿದ್ದದ್ದು. ಉತ್ತರಾಧಿಕಾರ ಕಾಯಿದೆ ಜಾರಿ ಬಂದ ನಂತರವೂ ಮಿತಾಕ್ಷರ ಪಾಲುದಾರಿಕೆಯು ಮಹಿಳೆಯರನ್ನು ಪಾಲುದಾರಿಕೆಯಿಂದ ಹೊರಗೇ ಉಳಿಸುತ್ತಿದೆ. ಈ ಕಾಯಿದೆಯ ಪ್ರಕಾರ, ಮನೆತನದ ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಸಿಗುತ್ತದೆ, ಆದರೆ ಅವರು ಪಾಲಾಗಲು ಕೇಳುವಂತಿಲ್ಲ. ಅದರ ಸಂಪೂರ್ಣ ಹಕ್ಕು ಮನೆತನದ ಗಂಡಸರದ್ದೇ. ಸ್ವಯಾರ್ಜಿತ ಆಸ್ತಿಗೆ ಸಂಬಂಧಿಸಿದಂತೆ, ವಿಧವಾ ಪತ್ನಿಗೂ ಉಳಿದ ಪಾಲುದಾರರೊಂದಿಗೆ ಸಮಪಾಲು ದೊರೆಯುತ್ತದೆ. ಸತ್ತವನ ಹಿಂದಿನ ಹೆಂಡತಿಯರಿಗೂ ಸಮಾನಪಾಲು. ಅವಕಾಶವಿರುವಲ್ಲೆಲ್ಲಾ ಆಸ್ತಿಯಲ್ಲಿ ಪಾಲಿದ್ದರೂ ವಿಭಜಿಸುವ ಹಕ್ಕು ಆಕೆಗಿಲ್ಲ. ಹಿಂದು ಪುರುಷನು ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ತನ್ನ ಪಾಲನ್ನು ಕಾಯ್ದಿರಿಸಿಕೊಳ್ಳದೆಯೊ ಅಥವಾ ತನ್ನ ಪಾಲನ್ನು ತ್ಯಜಿಸಿಯೊ, ಅಥವಾ ಹೆಂಡತಿಯ ಪಾಲನ್ನು ಮುಟ್ಟುಗೋಲ ಮಾಡಿಕೊಂಡೊ, ತನ್ನ ಆಸ್ತಿಯನ್ನು ವಿಭಜಿಸುವ ಹಕ್ಕನ್ನು ಪಡೆದುಕೊಂಡಿದ್ದಾನೆ. ಅಲ್ಲದೆ ಅವನ ಸ್ವಯಾರ್ಜಿತ ಆಸ್ತಿಯನ್ನು, ಸಹಭಾಗಿತ್ವ ಆಸ್ತಿಯನ್ನಾಗಿ ಪರಿವರ್ತಿಸುವ ಹಕ್ಕು ಅವನಿಗಿದೆ. ಕೃಷಿ ಸಂಬಂಧಿ ಆಸ್ತಿಯಾದರೆ, ಮಹಿಳೆಯರಿಗೆ ಗೇಣಿ ಹಕ್ಕುಗಳು ವರ್ಗಾಯಿಸಲ್ಪಡುವುದಿಲ್ಲ.

ಇಸ್ಲಾಮಿ ಕಾನೂನು : ಇಸ್ಲಾಮಿ ಕಾನೂನಿನಡಿಯಲ್ಲಿ ಗಂಡುಮಕ್ಕಳು ಪ್ರತಿ ಹಂತದಲ್ಲೂ ಹೆಣ್ಣು ಮಕ್ಕಳ ಎರಡು ಪಟ್ಟು ಪಾಲನ್ನು ಪಡೆಯುವರು. ಹೆಣ್ಣು ಮಕ್ಕಳು ಗಂಡು ಮಕ್ಕಳು ಪಡೆಯುವ ಪಾಲಿನ ಅರ್ಧ ಪಾಲನ್ನಷ್ಟೆ ಪಡೆಯುವರು. ಸುನ್ನಿ ಹನಾಫಿ ಧರ್ಮತತ್ವದ ಪ್ರಕಾರ–ಮೃತಪಟ್ಟ ಗಂಡಸಿನ ವಿಧವೆಯು, ಗಂಡನ ಆಸ್ತಿಯ 1/8 ಭಾಗವನ್ನು ಪಡೆಯಬಹುದು, ಮಕ್ಕಳು ಇಲ್ಲದಿದ್ದ ಪಕ್ಷದಲ್ಲಿ ಆಕೆಯ ಪಾಲು 1/4ರಷ್ಟು ಹೆಚ್ಚಾಗುವುದು.

ಶಿಯಾ ಧರ್ಮ ತತ್ವದ ಪ್ರಕಾರ–ಮಕ್ಕಳು ಇಲ್ಲದಿದ್ದರೆ ಸಕಲ ಆಸ್ತಿಗೂ ಅವಳೆ ಉತ್ತರಾಧಿಕಾರಿ.

ಇಸ್ಲಾಮಿ ಕಾನೂನಿನ ಪ್ರಕಾರ ಕೇವಲ 1/3 ಆಸ್ತಿಗೆ ಮಾತ್ರ ಉಯಿಲು ಬರೆಯಬಹುದು. ಇದರಿಂದಾಗಿ ಮುಸ್ಲಿಂ ವಿಧವೆಯರಿಗೆ ಉತ್ತರಾಧಿಕಾರಿತ್ವದ ಹಕ್ಕುಗಳ ಭದ್ರತೆ ಹೆಚ್ಚು. ಮುಸ್ಲಿಂ ಮಹಿಳೆಯರು ತಮ್ಮ ಆಸ್ತಿಗೆ ತಾವೇ ಸಂಪೂರ್ಣ ಹಕ್ಕುದಾರರು.

ಕ್ರಿಶ್ಚಿಯನ್ ಕಾನೂನು : ಬಹುಪಾಲು ಕ್ರಿಶ್ಚಿಯನ್ನರು ಉತ್ತರಾಧಿಕಾರತ್ವಕ್ಕೆ ಸಂಬಂದಪಟ್ಟಂತೆ, ಭಾರತೀಯ ಉತ್ತರಾಧಿಕಾರತ್ವ ಕಾಯಿದೆ 1925ಕ್ಕೆ ಒಳಪಡುತ್ತಾರೆ. ಮೃತ್ಯುಪತ್ರ ಮಾಡದೆ ಕ್ರಿಶ್ಚಿಯನ್ ಪುರುಷನು ಮಡಿದರೆ, ಆತನಿಗೆ ಹೆಂಡತಿ ಇದ್ದು ಉಳಿದ ವಾರಸುದಾರರಿಲ್ಲದಿದ್ದರೆ ಹಾಗು ಅವನ ಆಸ್ತಿ 5000 ರೂ.ಗೆ ಹೆಚ್ಚಿನ ಮೌಲ್ಯದಲ್ಲದಿದ್ದರೆ, ಹೆಂಡತಿ ಆ ಆಸ್ತಿಗೆ ಸಂಪೂರ್ಣ ಹಕ್ಕುದಾರಳು. ಆಸ್ತಿಯೂ 5000 ರೂ.ಗೂ ಹೆಚ್ಚಿನ ಮೌಲ್ಯದಾಗಿದ್ದರೆ, ವಾರಸುದಾರರಿದ್ದರೆ 5000 ರೂ. ಮೌಲ್ಯದವರೆಗಿನ ಆಸ್ತಿಯನ್ನು ಹೆಂಡತಿ ತನ್ನ ವಶದೊಳಗಿಟ್ಟುಕೊಳ್ಳಬಹುದು. ಉಳಿದ ಆಸ್ತಿಯನ್ನು ಮಕ್ಕಳೊಂದಿಗೆ ಹಂಚಿಕೊಳ್ಳಬಹುದು.

ಕೇರಳದಲ್ಲಿ 1986ರವರೆಗೂ ವಿವಿಧ ಉತ್ತರಾಧಿಕಾರಿ ಕಾಯಿದೆಗಳಿದ್ದವು. ಟ್ರಾವಂಕೂರ್ ಕ್ರಿಶ್ಚಿಯನ್ ಉತ್ತರಾಧಿಕಾರಿ ಕಾಯಿದೆ 1092, 1916 ಹಾಗು ಕೊಚ್ಚಿನ್ ಕ್ರಿಶ್ಚಿಯನ್ ಕಾಯಿದೆ 1097, 1921ಗಳು ಕೇರಳದ ಬೇರೆಬೇರೆ ಪ್ರದೇಶಗಳಲ್ಲಿದ್ದ ಕ್ರಿಶ್ಚಿಯನ್‌ರಿಗೆ ಅನ್ವಯಿಸುತ್ತಿತ್ತು.

ಟ್ರಾವಂಕೂರ್ ಕಾಯಿದೆಯನುಸಾರ, ಮರಣ ಹೊಂದಿದ ವ್ಯಕ್ತಿಗೆ ವಿಧವೆ ಹಾಗು ಇತರ ವಾರಸುದಾರರಿದ್ದಲ್ಲಿ, ಆಕೆ ಗಂಡಮಕ್ಕಳೊಂದಿಗೆ ಸಮಪಾಲು ಪಡೆಯಬಹುದು. ಹೆಣ್ಣು ಮಕ್ಕಳು ಸ್ತ್ರೀಧನದ ಹಕ್ಕನ್ನು ಪಡೆಯುತ್ತಾರೆ. ಸ್ತ್ರೀಧನವು ಗಂಡು ಮಗನ ಪಾಲಿನ 1/4 ಭಾಗದಷ್ಟು ಅಥವಾ 5000 ರೂ. ಯಾವುದು ಕಡಿಮೆಯೊ ಆ ಮೌಲ್ಯದಾಗಿರುತ್ತದೆ.

ಕೊಚ್ಚಿನ್ ಕಾಯಿದೆ ಪ್ರಕಾರ–ಪುರುಷನು ಮಡಿದರೆ, ಮಗನ ಪಾಲಿನಲ್ಲಿ 2/3 ಭಾಗವನ್ನು ಹೆಂಡತಿ ಪಡೆಯುವಳು. ಹೆಂಡತಿ ಹಾಗು ಹೆಣ್ಣು ಮಕ್ಕಳಷ್ಟೆ ಇದ್ದರೆ, ವಿಧವೆ, ಹೆಣ್ಣು ಮಕ್ಕಳೊಂದಿಗೆ ಸಮಪಾಲು ಪಡೆಯುವಳು.

ಹೆಣ್ಣು ಮಕ್ಕಳು ಸ್ತ್ರೀಧನದ ಹಕ್ಕನ್ನು ಹೊಂದಿರುತ್ತಾರೆ. ಸ್ತ್ರೀಧನದ ಮೌಲ್ಯವು ಮಗನ ಪಾಲಿನ 1/3 ರಷ್ಟು, ಹೆಣ್ಣು ಮಕ್ಕಳು ಸ್ತ್ರೀ ಧನವನ್ನು ಪಡೆದಿದ್ದರೆ ಅಥವಾ ಪಡೆಯುವ ಆಶ್ವಾಸನೆಯನ್ನು ಪಡೆದಿದ್ದರೆ, ಹೆಣ್ಣು ಆಸ್ತಿಯಲ್ಲಿ ಪಾಲನ್ನು ಕೇಳುವ ಹಕ್ಕಿಲ್ಲ.

ಪಾರ್ಸಿ ಕಾನೂನು :ಪಾರ್ಸಿ ಉತ್ತರಾಧಿಕಾರತ್ವವು, ಭಾರತೀಯ ಉತ್ತರಾಧಿಕಾರತ್ವ ಕಾಯಿದೆ 1925ಕ್ಕೆ ಒಳಪಡುತ್ತದೆ. ಆಸ್ತಿಯನ್ನು ವರ್ಗಾಯಿಸುವಾಗ, ಮಹಿಳೆಯರಿಗೆ, ಪುರುಷರಿಗೆ ಬೇರೆಬೇರೆ ನಿಯಮಗಳಿವೆ. ಪುರುಷನು ಮರಣ ಹೊಂದಿದರೆ ಆತನ ಪತ್ನಿ ಹಾಗು ಗಂಡು ಮಕ್ಕಳು, ಹೆಣ್ಣುಮಕ್ಕಳು ಪಡೆಯುವ ಪಾಲಿನ ಎರಡುಪಟ್ಟು ಪಡೆಯುತ್ತಾರೆ. ಹೆಂಡತಿಯ ಆಸ್ತಿಯಲ್ಲಿ ಗಂಡ ಹಾಗು ಹೆಣ್ಣು ಹಾಗು ಗಂಡು ಮಕ್ಕಳು ಸಮ ಪಾಲು ಪಡೆಯುತ್ತಾರೆ.

ದತ್ತಕ ಮತ್ತು ಪಾಲಕತನ : ಹಿಂದೂ ಮತ್ತು ಮುಸಲ್ಮಾನರನ್ನು ಹೊರತುಪಡಿಸಿ, ಉಳಿದೆಲ್ಲ ಸಮುದಾಯಗಳಿಗೂ 1890ರ ಪಾಲಕತನ ಕಾಯಿದೆ ಅನ್ವಯಿಸುತ್ತದೆ. ಇದರನ್ವಯ, ತಂದೆಯೇ ಮಕ್ಕಳ ಸಹಜ ಪಾಲಕನಾಗಿರುತ್ತಾನೆ.

ಹಿಂದೂ ಕಾನೂನು : 1956ರ ಹಿಂದೂ ದತ್ತಕ ಮತ್ತು ಜೀವನಾಂಶ ಕಾಯಿದೆ ಬರುವ ಮೊದಲು ಕೇವಲ ಹಿಂದೂ ಗಂಡಸು ಮಾತ್ರ ಗಂಡು ಮಗುವನ್ನೂ ದತ್ತಕ ತೆಗೆದುಕೊಳ್ಳಬಹುದಾಗಿತ್ತು ಮತ್ತು ಗಂಡನಿಂದ ಅಧಿಕೃತ ಅಂಗೀಕಾರ ಪಡೆದ ಹೆಂಗಸು ಮಾತ್ರ ಗಂಡು ಮಗುವನ್ನು ದತ್ತು ಪಡೆಯಬಹುದಾಗಿತ್ತು. 1926ರ ಕಾಯಿದೆಯನ್ವಯ ಗಂಡು ಮತ್ತು ಹೆಣ್ಣು ಮಕ್ಕಳಿಬ್ಬರನ್ನೂ ದತ್ತು ಪಡೆಯಬಹುದು. ಒಬ್ಬಳೇ ಇರುವ ಹಿಂದು ಮಹಿಳೆಯೂ ದತ್ತು ತೆಗೆದುಕೊಳ್ಳಬಹುದು. ಆದರೆ ಮದುವೆಯಾದ ಹಿಂದು ಮಹಿಳೆ ಆಕೆಯ ಗಂಡ ದತ್ತು ಪಡೆಯಲು ಅರ್ಹವಾಗಿದ್ದಾಗ ಪಡೆಯಕೂಡದು.

1956ಕ್ಕೆ ಮುಂಚೆ ಹಿಂದೂ ತಂದೆಯೇ ಮಕ್ಕಳ ಸಹಜ ಪಾಲಕನಾಗಿದ್ದನು. ಹಿಂದೂ ದತ್ತಕ ಮತ್ತು ಜೀವನಾಂಶ ಕಾಯಿದೆ ಜಾರಿಯಾದ ನಂತರ ನ್ಯಾಯಯುತ ಮಕ್ಕಳಿಗೆ ಸಂಬಂಧಿಸಿದಂತೆ ತಂದೆಯೇ ಮೊದಲ ಸಹಜ ಪಾಲಕ ನಂತರ ತಾಯಿ. ನ್ಯಾಯಯುತವಲ್ಲದ ಮಗುವಿನ ಸಂಬಂಧದಲ್ಲಿ ತಾಯಿಯೇ ಅದರ ಸಹಜ ಪಾಲಕಳು. ಅವಯಸ್ಕ ಹೆಂಡತಿಗೆ ಗಂಡನೇ ಪಾಲಕ.

ಇಸ್ಲಾಮೀ ಕಾನೂನು : ದತ್ತಕ ಸಾಧ್ಯವಿಲ್ಲ. ತಂದೆಯೇ ಮಕ್ಕಳ ಸಹಜ ಪಾಲಕ. ತಾಯಿಗೆ ವಾರಸುದಾರಿಕೆ (custody) ಯ ಹಕ್ಕಷ್ಟೇ ಇದೆ.

ಕ್ರಿಶ್ಚಿಯನ್ ಕಾನೂನು : ದತ್ತಕ ಇಲ್ಲ. ಪಾಲಕತನವು 1890ರ ಪಾಲಕತನದ ಕಾಯಿದೆಯ ನಿಬಂಧಕ್ಕೊಳಪಟ್ಟಿರುತ್ತದೆ.

ಕರ್ನಾಟಕ ಸ್ವಾಯತ್ತ ಮಹಿಳಾ ಒಕ್ಕೂಟ ನವೆಂಬರ್ ಮಾಹೆ 1995ರಲ್ಲಿ ಸಮಾನ ನಾಗರಿಕ ಸಂಹಿತೆಯನ್ನು ಕುರಿತು ಮೈಸೂರಿನಲ್ಲಿ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ವಕೀಲರಾದ ಗೀತಾ ವೈಯಕ್ತಿಕ ಕಾನೂನುಗಳ ಬಗ್ಗೆ ಡಾ॥ ವಿಜಯ ದಬ್ಬೆಯರು ಸ್ವಾತಂತ್ರ್ಯೋತ್ತರ ರಾಜಕಾರಣ ಮತ್ತು ಸಮಾನ ನಾಗರಿಕ ಸಂಹಿತೆಯನ್ನು ಕುರಿತು, ಮಾನಸ, ಮಹಿಳಾ ಚಳವಳಿ ಮತ್ತು ಸಮಾನ ನಾಗರಿಕ ಸಂಹಿತೆಯನ್ನು ಕುರಿತು ಪ್ರಬಂಧ ಮಂಡಿಸಲಾಯಿತು. ಈ ವಿಚಾರ ಸಂಕಿರಣದಲ್ಲಿ ಮಹಿಳಾ ಜಾಗೃತಿ, ವಿಮೋಚನಾ, ಮಹಿಳಾ ಸಮಾಖ್ಯಾ, ಸಮತಾ, ಮಾನಸ ಸಂಘಟನೆಗಳು ಭಾಗವಹಿಸಿದ್ದವು.

ಐಚ್ಛಿಕ ಸಮಾನ ನಾಗರಿಕ ಸಂಹಿತೆ

ನೊಂದ ಮಹಿಳೆಯರಿಗೆ ನೆರವು ನೀಡುವ ಹಾಗೂ ವರದಕ್ಷಿಣೆ, ಗೃಹಹಿಂಸೆ, ಅತ್ಯಾಚಾರ, ಭ್ರೂಣಪರೀಕ್ಷೆ ಮುಂತಾದವುಗಳಿಗೆ ಸಂಬಂಧಪಟ್ಟ ಸ್ತ್ರೀ ಪರ ಕಾನೂನುಗಳಿಗಾಗಿ ನಡೆಸಿದ ಹೋರಾಟದ ಹಿನ್ನಲೆಯಲ್ಲಿ ಕಾನೂನಿನ ಮಿತಿಗಳು ಹಾಗೂ ಅದರ ಹಿಂದಿರುವ ಮೌಲ್ಯಗಳ ಶೋಧನೆಯಲ್ಲಿ ತೊಡಗುವುದು ನಮಗೆ ಅನಿವಾರ್ಯವಾಯಿತು.

ನ್ಯಾಯ ಸಿಗುವಲ್ಲಿನ ವಿಳಂಬ, ದುಬಾರಿಯಾದ, ಹಾಗೂ ಸುಲಭವಾಗಿ ಲಭ್ಯವಾಗದ ನ್ಯಾಯಾಂಗದಿಂದ ನ್ಯಾಯ ಪಡೆಯ ಎಯುಸಿದ ಬಹುಪಾಲು ಮಹಿಳೆಯರ ಅನುಭವ ನಿರಾಶಾದಾಯಕವಾದುದು. ವೈವಾಹಿಕ ಸಮಸ್ಯೆ, ಜೀವನಾಂಶ, ಮಕ್ಕಳ ಪೋಷಣೆ, ಹಾಗೂ ಹಕ್ಕು ಮುಂತಾದವುಗಳಿಗಾಗಿ ಮಹಿಳೆಯರು ನ್ಯಾಯಾಲಯದ ಮೊರೆ ಹೋಗುತ್ತಾರೆ. ಈ ನ್ಯಾಯಕ್ಕಾಗಿ ಅವರವರ ವೈಯಕ್ತಿಕ ಕಾನೂನುಗಳನ್ನೂ ಅವಲಂಬಿಸಬೇಕಾಗಿದೆ, ಈ ವೈಯಕ್ತಿಕ ಕಾನೂನುಗಳು ಸ್ತ್ರೀ ವಿರೋಧಿ ಧೋರಣೆಯನ್ನು ಹೊಂದಿವೆ. ಏಕೆಂದರೆ ಈ ಕಾನೂನುಗಳು ಧಾರ್ಮಿಕ ಗ್ರಂಥ ಹಾಗೂ ಶಾಸ್ತ್ರಗಳು ಪಿತೃಪ್ರಧಾನತೆಯ ಹಿನ್ನಲೆಯಲ್ಲಿ ವ್ಯಾಖ್ಯಾನಿಸಲ್ಪಡುತ್ತವೆ. ಮೇರಿ ರಾಯ್ ಅವರು ಆಕೆಯ ಜನಾಂಗವು ವಂಶಪಾರಂಪರ್ಯವಾಗಿ ಹೊಂದಿರುವ ಹಕ್ಕುಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಶಹನಾಜ್ ಶೇಖ್ ಮುಸ್ಲಿಂ ವೈಯಕ್ತಿಕ ಕಾನೂನಿನ ಹಲವು ವಿಚಾರಗಳನ್ನು, ವಂದನಾ ಶಿವ ಹಿಂದೂ ವೈಯಕ್ತಿಕ ಕಾನೂನಿನಡಿಯಲ್ಲಿನ ಮಕ್ಕಳ ಪೋಷಣೆ ಕಾನೂನನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಈ ಹಿಂದೆ, ನಾವು ಹಾಗೂ ಇತರ ಮಹಿಳಾ ಸಂಘಟನೆಗಳು ಸಮಾನ ನಾಗರಿಕ ಸಂಹಿತೆಯ ಬೇಡಿಕೆಯನ್ನು ಇಟ್ಟಿದ್ದೆವು. ಆದರೆ ಈಗ ಸಮಾನ ನಾಗರಿಕ ಸಂಹಿತೆ ಹಾಗೂ ವಿಭಿನ್ನ ಸ್ವರೂಪ ಹಾಗೂ ಬಣ್ಣವನ್ನು ತಳೆದಿದೆ. ಮಹಿಳಾ ಸಂಘಟನೆಗಳ ಈ ಬೇಡಿಕೆಯನ್ನು ಬಿ.ಜೆ.ಪಿ. ಹಾಗೂ ಅಲ್ಪಸಂಖ್ಯಾತ ಮತೀಯ ಶಕ್ತಿಗಳು ತಮ್ಮ ಬೇಡಿಕೆಯನ್ನಾಗಿಸಿಕೊಳ್ಳುವುದರ ಜೊತೆಗೆ ಮತೀಯ ಬಣ್ಣವನ್ನು ನೀಡಿವೆ.

ಇದು ಈಗ ಯಾವ ಹಂತವನ್ನು ತಲುಪಿದೆಯೆಂದರೆ, ಸಮಾನ ನಾಗರಿಕ ಸಂಹಿತೆಯ ಪರ, ಪ್ರಗತಿಪರ ವಿಚಾರ- ಅಥವಾ ಸಮಾನ ನಾಗರಿಕ ಸಂಹಿತೆಯ ವಿರೋಧ ಅಲ್ಪ ಸಂಖ್ಯಾತರ ಕಠಿಣವಾದ ನಿಲುವು.

ಈ ಎರಡು ಮೂಲಭೂತವಾದಿಗಳ ವಿಚಾರಗಳಿಗೂ ನಮ್ಮ ಆಲೋಚನೆಗಳಿಗೆ ಅಜಗಜಾಂತರ ವ್ಯತ್ಯಾಸವಿದೆ. ಬಿ.ಜೆ.ಪಿ. ಎಂದೂ ಸ್ತ್ರೀಯರ ಹಕ್ಕು ಬಾಧ್ಯತೆಗಳಿಗೆ ಆದ್ಯತೆಯನ್ನು ನೀಡಿಲ್ಲ. ಬದಲಾಗಿ ಅದು ಸ್ತ್ರೀ ವಿಜೃಂಭಿತ ತಾಯ್ತನ ಹಾಗೂ ಸ್ತ್ರೀಯರ ಸಂಪ್ರದಾಯಿಕ ಪಾತ್ರವನ್ನು ಎತ್ತಿ ಹಿಡಿದಿದೆ. ಹಾಗಾಗಿ ಬಿ.ಜೆ.ಪಿ ಸ್ತ್ರೀಯರ ಬಗ್ಗೆ ಪ್ರಗತಿಪರ ನಿಲುವನ್ನು ಹೊಂದಿದೆಯೆಂದು ಹೇಳಲಾಗುವುದಿಲ್ಲ. ಆದರೆ ಬಿ.ಜೆ.ಪಿ ಸಮಾನ ನಾಗರಿಕ ಸಂಹಿತೆಯ ಬೇಡಿಕೆಯನ್ನು ಮುಂದಿಡುವಲ್ಲಿ ಮುಸ್ಲಿಂ ವಿರೋಧಿ ಅಂಶ ಇರುವುದನ್ನು ಹಾಗೂ ಹಿಂದೂ ಪೂರ್ವಾಗ್ರಹಗಳನ್ನು ಬಲಪಡಿಸುವುದನ್ನು ಕಾಣಬಹುದು. ಇನ್ನೊಂದು ಕಡೆ ಮುಸ್ಲಿಂ ಮೂಲಭೂತವಾದಿಗಳು ತಮ್ಮ ಕಠಿಣ ನಿಲುವಿನಿಂದಾಗಿ, ಈ ಬೇಡಿಕೆಯು ತಮ್ಮ ಧರ್ಮದ ಮೇಲೆ ನಡೆಯುತ್ತಿರುವ ಆಕ್ರಮಣವೆಂದು ಭಾವಿಸುತ್ತಾರೆ. ಮಹಿಳೆಯರ ಹಕ್ಕು ಬಾಧ್ಯತೆಗಳಿಗೆ ಸಂಬಂಧಿಸಿದ ಹಾಗೆ 40 ವರ್ಷಗಳಿಂದಲೂ ಮುಸ್ಲಿಂ ವೈಯಕ್ತಿಕ ಕಾನೂನಿನಲ್ಲಿ ಯಾವುದೇ ಸುಧಾರಣೆಯನ್ನೂ ತರುವ ಪ್ರಯತ್ನ ನಡೆದಿಲ್ಲ.

ಸಮಾನ ನಾಗರಿಕ ಸಂಹಿತೆ ಬೇಕು ಅಥವಾ ಬೇಡ ಎಂಬ ಹಂತದ ಪ್ರತಿಕ್ರಿಯೆಯಿಂದ ನಾವು ಮುಂದೆ ಹೋಗಬೇಕಾಗಿದೆ. ಅದು ಮಹಿಳಾ ಶೋಷಣಾ ವಿರೋಧಿ ವೇದಿಕೆಯ ನಿಲುವು. ಲಿಂಗ ಸಮಾನತೆ ಯಾವುದು ಕಾನೂನಿನ ಮೂಲ ನೆಲೆಯಾಗಿರಬೇಕು. ಕಾನೂನಿನಲ್ಲಿ ತರುವ ಯಾವುದೇ ಬದಲಾವಣೆ ಮೂಲಭೂತ ಬದಲಾವಣೆಯಾಗಿರಬೇಕು.

ಇಂದು ತೀವ್ರವಾಗಿರುವ ಮತೀಯ ಗೊಂದಲದ

ವಾತಾವರಣದಲ್ಲಿ ಯಾವುದೇ ಒಂದು ಕಾನೂನನ್ನು ಒಂದು ಜನಾಂಗದ ಮೇಲೆ ಹೇರುವುದು ಸರಿಯಲ್ಲ. ಹಾಗಾಗಿ ನಾವು ಐಚ್ಛಿಕ ನಾಗರಿಕ ಸಂಹಿತೆಯ ಬೇಡಿಕೆಯನ್ನು ಮುಂದಿಡುತ್ತಿದ್ದೇವೆ. ಐಚ್ಛಿಕ ನಾಗರಿಕ ಸಂಹಿತೆಯ ಜಾರಿಗೆ ಬಂದರೆ ಮಹಿಳೆ ಅಥವಾ ಪುರುಷ ಯಾವುದೇ ಧರ್ಮಕ್ಕೆ ಸೇರಿದ್ದರೂ, ಅವರ ಆಯ್ಕೆಯ ಪ್ರಕಾರ ಐಚ್ಛಿಕ ನಾಗರಿಕ ಸಂಹಿತೆಯನ್ನು ಉಪಯೋಗಿಸಿಕೊಳ್ಳಬಹುದು. ನೊಂದ ವ್ಯಕ್ತಿಗಳು ಐಚ್ಛಿಕವಾಗಿ ಸಮಾನ ನಾಗರಿಕ ಸಂಹಿತೆಯನ್ನು ಆಯ್ಕೆ ಮಾಡಿಕೊಂಡ ಪಕ್ಷದಲ್ಲಿ, ವೈಯಕ್ತಿಕ ಕಾನೂನಿಗಿಂತ, ಐಚ್ಛಿಕ ನಾಗರಿಕ ಸಮಾನ ಸಂಹಿತೆಯೇ ಶ್ರೇಷ್ಠವಾಗುತ್ತದೆ. ಹೊಸ ಕಾನೂನುಗಳು ವಿವಾಹ, ವಿಚ್ಛೇಧನ, ಜೀವನಾಂಶ, ದತ್ತು, ಮಕ್ಕಳ ಪೋಷಣೆ, ಸ್ವಾಮ್ಯತೆ, ಆಸ್ತಿ ಮುಂತಾದವುಗಳನ್ನು ಒಳಗೊಂಡಿರಬೇಕು. ಇದರೊಡನೆ, ತವರು ಮನೆಯ ಆಸ್ತಿಕ ಹಕ್ಕು ಬಾಧ್ಯತೆಗಳನ್ನು ಒಳಗೊಂಡಿರಬೇಕು.

ಜೊತೆ ಜೊತೆಗೆ ವೈಯಕ್ತಿಕ ಕಾನೂನಿನಲ್ಲಿ ಉಂಟಾಗುವ ಬದಲಾವಣೆಯ ಅನುಕೂಲವನ್ನು ಪಡೆಯಬಹುದು. ಈ ವೈಯಕ್ತಿಕ ಕಾನೂನಿನಲ್ಲಿನ ಬದಲಾವಣೆಗಳು ಆಯಾ ಜನಾಂಗದ ಸದಸ್ಯರಲ್ಲಿ ಮಹಿಳೆಯರ ಹಕ್ಕು ಬಾಧ್ಯತೆಗಳ ಬಗ್ಗೆ ಅರಿವನ್ನು ಮೂಡಿಸುವುವು. ಕೆಲವು ಜನಾಂಗಗಳು ಆಯಾ ಸದಸ್ಯರ ಮೇಲೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಮಾನ ನಾಗರಿಕ ಕಾನೂನನ್ನು ಆಯ್ಕೆ ಮಾಡಿಕೊಳ್ಳದಂತೆ ಒತ್ತಡವನ್ನು ಹೇರಬಹುದು, ಏಕೆಂದರೆ ವೈಯಕ್ತಿಕ ಕಾನೂನುಗಳು ಧಾರ್ಮಿಕ ಹಾಗೂ ಸಾಂಸ್ಕೃತಿಕ ಪ್ರತೀಕಗಳಾಗಿವೆ.

ಹೊಸದಾದ ನಾಗರಿಕ ಸಂಹಿತೆ ಹಾಗೂ ವೈಯಕ್ತಿಕ ಕಾನೂನಿನಲ್ಲಿನ ಸುಧಾರಣೆಗಳನ್ನು ಸರಕಾರ ಹೇರುವಂತಾಗಬಾರದು. ಈ ಸಮಾನ ನಾಗರಿಕತೆಯನ್ನು ಕೋಮು ಭಾವನೆಯಿಂದ ಪ್ರತ್ಯೇಕಿಸಿ, ಲಿಂಗಾಧಾರಿತ ನ್ಯಾಯ ಪರಿಕಲ್ಪನೆಯೆಂಬ ಅರಿವು ಮೂಡಿಸಬೇಕಾಗಿದೆ. ಇದು ಪ್ರಜಾತಾಂತ್ರಿಕ, ಸಮಾಜದ ವಿವಿಧ ಸ್ತರದ ಜನರು ಭಾಗವಹಿಸುವ ಒಂದು ಪ್ರತಿಕ್ರಿಯೆಯಾಗಬೇಕು. ಈ ಬದಲಾಗಬೇಕಾಗಿರುವ ಕಾನೂನುಗಳ ಬಗ್ಗೆ ಸಾರ್ವಜನಿಕ ಚರ್ಚೆಯಾಗಬೇಕು. ಈ ಚರ್ಚೆಯು ಸ್ತ್ರೀಯರನ್ನು ಅದರಲ್ಲಿಯೂ ನ್ಯಾಯಾಲಯದ ಮೊರೆ ಹೋಗಿರುವ ಸ್ತ್ರೀಯರನ್ನು ಒಳಗೊಂಡಿರಬೇಕು. ಹೊಸ ಕಾನೂನನ್ನು ರೂಪಿಸುವ ಹಂತದಲ್ಲಿ ಇವರು ನಿರ್ಣಾಯಕ ಪಾತ್ರವನ್ನು ವಹಿಸಬೇಕು. ಕ್ರಿಶ್ಚಿಯನ್ ವೈಯಕ್ತಿ ಕಾನೂನನ್ನು ತೀವ್ರಗತಿಯಲ್ಲಿ ಜಾರಿಗೆ ತರಬೇಕು.

ಎಲ್ಲ ಮಹಿಳಾ ಸಂಘಟನೆಗಳು ಹಾಗೂ ಪ್ರಗತಿಪರ ಸಂಘಟಗಳು ಲಿಂಗಸಮಾನತೆಯ ನ್ಯಾಯಕ್ಕಾಗಿ, ಸಮಾನ ನಾಗರಿಕ ಸಂಹಿತೆಯ ರಚನೆ ಹಾಗೂ ಜಾರಿಗೆ ತರುವಲ್ಲಿ ಸಂಘಟಿತರಾಗಿ ಶ್ರಮಿಸಬೇಕೆಂದು ಕರೆನೀಡುತ್ತೇವೆ.

ಸ್ತ್ರೀ ಶೋಷಣಾ ವಿರೋಧಿ ವೇದಿಕೆ
ಬಾಂಬೆ

ಸಮಾನ ನಾಗರಿಕ ಸಂಹಿತೆಯ ಪರವಾಗಿ

ಇಂದಿರಾ ಜೈಸಿಂಗ್ ಪ್ರಸಿದ್ಧ ವಕೀಲರು. ಹಿಂದೂ ವೈಯಕ್ತಿಕ ಕಾನೂನುಗಳನ್ನು ವಿಮರ್ಶಾತ್ಮಕವಾಗಿ ನೋಡುತ್ತಾರೆ. ಗುರುಮುಖ್‌ಸಿಂಗ್ ಅವರಿಗೆ ನೀಡಿದ ಸಂದರ್ಶನದಲ್ಲಿ ಅವರು ಲಿಂಗ ಸಮಾನ ನಾಗರಿಕ ಸಂಹಿತೆಯ ಬಗ್ಗೆ ಮಾತನಾಡಿದ್ದಾರೆ.

ಪ್ರ : ಬಾಂಬೆಯಲ್ಲಿ ನೀವು ಹಿಂದೂ ವೈಯಕ್ತಿಕ ಕಾನೂನುಗಳಲ್ಲಿ ಸುಧಾರಣೆಗಳಾದ ಮೇಲೆ ಹಿಂದೂ ಮಹಿಳೆಯರ ಹಕ್ಕುಗಳು ಅವನತಿ ಹೊಂದುತ್ತಿವೆ ಎಂದು ಹೇಳಿದಿರಿ. ಇದನ್ನು ವಿವರಿಸಿ ಹೇಳುತ್ತೀರಾ ?

ಉ : ವಿಚ್ಛೇದನದ ಹಕ್ಕಿಗಾಗಿ, ಹಕ್ಕಿನ ಪರವಾಗಿ-ಹಿಂದೂ ಹೆಂಗಸು ತನ್ನ ತವರು ಮನೆಯ ಮೇಲಿನ ಹಕ್ಕನ್ನು ಮಾರಾಟ ಮಾಡಿದ್ದಾಳೆ. ಇದು ಅನ್ಯಾಯಯುತವಾದ ಮಾರಾಟ. ತವರು ಮನೆಯಿಂದ ಆಚೆ ತಳ್ಳಬೇಕಾದಂತಹ ಕಠಿಣ ಪರೀಕ್ಷೆಯೊಂದಿಗೇ ಏಕೆ ಆಕೆ ವಿಚ್ಛೇದನದ ಹಕ್ಕನ್ನು ಪಡೆಯಬೇಕು ? ಭ್ರಮಾತ್ಮಕವಾದ ಜೀವನಾಂಶದ ಹಕ್ಕಿನ ಹೊರತಾಗಿ ಹಿಂದೂ ಕಾನೂನುಗಳಲ್ಲಿ ವಿಚ್ಛೇದಿತ ಮಹಿಳೆಯ ಹಕ್ಕುಗಳ ಕುರಿತ ಯಾವುದೇ ಅವಕಾಶಗಳೂ ಇಲ್ಲ. ಮದುವೆಯ

ಸಂಬಂಧ ಮುಂದು ಹೋದಾಗ ಮಹಿಳೆ ತವರು ಮನೆಯ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕನ್ನು ಹೊಂದಿರಲೇ ಬೇಕು.

ಹಿಂದೂ ಹೆಂಗಸರಿಗೆ ಅನುವಂಶೀಯತೆಯ ಹಕ್ಕಿದೆ ಯೆಂದು ಹೇಳಲಾಗುತ್ತದೆ. ಆದರೆ ಒಬ್ಬ ಗಂಡನೋ ಅಥವಾ ತಂದೆಯೋ ಹೆಂಡತಿಯ ಅಥವಾ ಮಗಳ ಅನುವಂಶೀಯತೆಯನ್ನು ವಿಲ್ ಮೂಲಕ ರದ್ದುಗೊಳಿಸ ಬಹುದಾಗಿದೆ. ಸುಧಾರಣೆಗಳೆಂದು ಕರೆಯುತ್ತೇವಲ್ಲ– ಅವು ಎಲ್ಲಿವೆ ? ಸುಧಾರಣೆಯಾಗುವ ಮುಂಚೆಯೇ ಹಿಂದೂ ಹೆಂಗಸು ಚನ್ನಾಗಿದ್ದಳು. ಆಕೆಯು ಜೀವವಿರು ವವರೆಗೆ ಆಕೆಯನ್ನು ಹಿಂದೂ ವಿಭಕ್ತ ಕುಟುಂಬದಿಂದ ಹೊರಗೆ ಹಾಕುತ್ತಿರಲಿಲ್ಲ. ಆಕೆಯ ಗಂಡ ಕೆಟ್ಟದ್ದಾಗಿ ನಡೆದುಕೊಂಡಿದ್ದರೆ ಬೇರೆಯದೇ ಆದ ಮನೆ ಕೇಳುವ ಹಕ್ಕು ಆಕೆಗಿತ್ತು.

ಪ್ರ : ಹಿಂದೂ ವೈಯಕ್ತಿಕ ಕಾನೂನುಗಳನ್ನು ತಿದ್ದಲು, ಬದಲಾಯಿಸಲು ಏನು ಮಾಡಬೇಕು ?

ಉ : ಹಿಂದೂ ಕಾನೂನುಗಳಲ್ಲಿ ಬಹಳಷ್ಟು ಬದಲಾವಣೆಗಳಾಗಬೇಕಿವೆ. ನಾನು ಎಲ್ಲಾ ಮಹಿಳೆ ಯರಿಗೆ ಅನ್ವಯವಾಗುವಂತಹ ಸಮಾನ ನಾಗರಿಕ ಸಂಹಿತೆಯ ಪರವಾಗಿ ಇದ್ದೇನೆ. ಬರಿಯ ಹಿಂದೂ ಹೆಂಗಸರಿಗಾಗಿ ಮಾತ್ರ ಅಲ್ಲ.

ಪ್ರ : ಹಿಂದೂ ಮೂಲಭೂತವಾದಿಗಳು, ಮಹಿಳಾ ಕಾರ್ಯಕರ್ತರು ಹಾಗೂ ನ್ಯಾಯವಾದಿ ಕಾರ್ಯಕರ್ತರ ದೃಷ್ಟಿಯಿಂದ 'ಏಕತಾ ನಾಗರಿಕ ಸಂಹಿತೆ'ಯ ಬಗ್ಗೆ ಇರುವ ಭಿನ್ನ ಭಿನ್ನ ದೃಷ್ಟಿ ಗಳೇನು ?

"ಏಕತಾ ನಾಗರಿಕ ಸಂಹಿತೆ" ಎಂಬ ಅಭಿವ್ಯಕ್ತಿ ಅರ್ಥ ವಿಲ್ಲದ್ದು. ಇದಕ್ಕೆ ಎರಡು ಕಾರಣಗಳಿವೆ. ನಮಗೆ ಏಕೆ ಮದುವೆ, ಅನುವಂಶೀಯತೆ ಇಂತಹ ವಿಚಾರಗಳಲ್ಲಿ ಏಕೆ ಏಕತಾ ಕಾನೂನು ಬೇಕು ? ಒಂದು ವಿಭಿನ್ನ ಧರ್ಮ ದವರಿಗೆ ಮದುವೆಯಾಗಲು ಅವಕಾಶವಾಗಲಿ ಎಂದು ಇನ್ನೊಂದು ಮಹಿಳೆಯರಿಗೆ ಸಮಾನತೆಯನ್ನು ದೊರಕಿಸುವುದಕ್ಕಾಗಿ. ಪ್ರತಿಯೊಂದು ವೈಯಕ್ತಿಕ ಕಾನೂನೂ-ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್-ಹೆಂಗಸರಿಗೆ ತಾರತಮ್ಯ ತೋರಿಸಿದೆ. ಬಿ.ಜೆ.ಪಿ.ಗೆ ಏಕೆ ಏಕತಾ ನಾಗರಿಕ ಸಂಹಿತೆ ಬೇಕು ಎಂಬುದು ಸ್ಪಷ್ಟವಾಗಿಲ್ಲ. ಮಹಿಳಾ ಚಳುವಳಿಗೆ ಇದು ನ್ಯಾಯಕ್ಕಾಗಿ ಇರುವ ಬೇಡಿಕೆ. ಎಲ್ಲಾ ಕಾನೂನುಗಳಲ್ಲಿಯೂ ಹೆಂಗಸರ ಬಗ್ಗೆ ಪೂರ್ವಗ್ರಹಪೀಡಿತ ಭಾವನೆಗಳಿವೆ. ಇವುಗಳಲ್ಲಿ ಮೂಲ ಭೂತವಾದ ಬದಲಾವಣೆಗಳಾಗಬೇಕಿವೆ.

ಪ್ರ : ನೀವು ಪ್ರಗತಿಪರ ಏಕತಾ ನಾಗರಿಕ ಸಂಹಿತೆಯ ಪರವಾಗಿರುವಿರೇ ಅದು ಹೇಗೆ ಕಾರ್ಯ ಶೀಲಗೊಳ್ಳಬಹುದು ? ಇದು ಎಲ್ಲಾ ವೈಯಕ್ತಿಕ ಕಾನೂನುಗಳಿಗಿಂತ ಹೆಚ್ಚಿನದ್ದಾಗಿರುತ್ತದೆಯೇ ? ಉದಾಹರಣೆಗೆ ಒಂದು ಪಕ್ಷ ಮುಸ್ಲಿಂ ಒಬ್ಬ ಮೂರು ಸಲ 'ತಲಾಖ್'' ಹೇಳಿದರೆ ಹೆಂಡತಿ "ಏಕತಾ ನಾಗರಿಕಾ ಸಂಹಿತೆಯ ನೆರೆ ಹೋಗಬಹುದಾಗಿ ದೆಯೆ ? ಅಂದರೆ ವೈಯಕ್ತಿಕ ಕಾನೂನು ಇಂತಹ ಸಂದರ್ಭದಲ್ಲಿ ಗಣನೀಯವಾಗುವುದಿಲ್ಲ ಅಲ್ಲವೇ ?

ಉ : ಹೌದು ನಾನು ಮದುವೆ, ವಿಚ್ಛೇದನ, ವಂಶ ಪಾರಂಪರ್ಯಕ್ಕೆ ಸಂಬಂಧಪಟ್ಟ ಹಾಗೆ ಎಲ್ಲಾ ಹೆಂಗಸರಿಗೆ ಪ್ರಗತಿಪರ ಕಾನೂನುಗಳು ಇರಬೇಕೆನ್ನುತ್ತೇನೆ. ಅಂತಹ ಕಾನೂನು ಜನರು ಇಷ್ಟಪಡುವ ರೀತಿಯಲ್ಲಿ ಮದುವೆ ಯಾಗಲು ಅವಕಾಶ ಮಾಡಿಕೊಡಬೇಕು. ಉದಾ:– ಚರ್ಚಿನಲ್ಲಿ, ದೇವಸ್ಥಾನದಲ್ಲಿ ಅಥವಾ ನಿಖಾ ಪದ್ಧತಿಯ ಮುಖಾಂತರ, ಆದರೆ ಮದುವೆಯಿಂದ ಉಂಟಾಗುವ ನಾಗರಿಕ ಪರಿಣಾಮಗಳನ್ನು ಎಲ್ಲರಿಗೂ ಸಮಾನವಾಗಿ ಅನ್ವಯವಾಗುವ ಕಾನೂನು ನಿರ್ಧರಿಸಬೇಕು. ಇದು ಜನರ ಧಾರ್ಮಿಕ ರೀತಿ/ನೀತಿಯ ಆಯ್ಕೆಯನ್ನು ನಿರ್ಧರಿಸುವುದಿಲ್ಲ. ಆದರೆ ಮದುವೆಯಿಂದ ಬರುವ ಹಕ್ಕುಗಳ ಮೇಲೆ ಹಿಡಿತ ಹೊಂದಿರಬೇಕಾಗುತ್ತದೆ.

'ಐಚ್ಛಿಕ ನಾಗರಿಕ ಸಂಹಿತೆ'ಯನ್ನು ನಾನು ನಂಬುವು ದಿಲ್ಲ. ಕೆಲವೇ ಗಂಡಸರು ಇಂತಹ ಕಾನೂನುಗಳನ್ನು ಇಚ್ಛಿಸಬಹುದು. ಆದರೆ ಬಹುಪಾಲು ಗಂಡಸರು ಇದನ್ನು ಪರಿಗಣಿಸುವುದೇ ಇಲ್ಲ. ಹೆಂಗಸು ಮಾತ್ರ ಇಂತಹ ಕಾನೂನಿಗೆ ಹೋಗಲು ಸಾಧ್ಯವಾಗುವುದಿಲ್ಲ. ಆಕೆಗೆ ಆಕೆಯ ಗಂಡನ ಅನುಮತಿ ಬೇಕಾಗುತ್ತದೆ. ರಕ್ಷಣೆ ಬೇಕಾಗುವ ಬಹುಪಾಲು ಹೆಂಗಸರಿಗೆ ಇಂತಹ 'ಐಚ್ಛಿಕ ನಾಗರಿಕ ಸಂಹಿತೆ'ಯಿಂದ ಪ್ರಯೋಜನವಾಗು ವುದಿಲ್ಲ.

ಪ್ರ : ಭಾರತದಲ್ಲಿ ಏಕತಾ ನಾಗರಿಕ ಸಂಹಿತೆ ಜಾರಿಗೆ ಬರುವ ಸಾಧ್ಯತೆಗಳಿವೆಯೇ ಇದಕ್ಕೆ ಪರ್ಯಾಯವೇನು ?

ಉ : ಯಾವುದೇ ಸುಧಾರಣಾ ಚಳುವಳಿಯ ಅಜೆಂಡಾದಲ್ಲಿ ಎಲ್ಲಾ ಮಹಿಳೆಯರಿಗೆ ಅನ್ವಯವಾಗುವ ಏಕತಾ ವಿವಾಹ, ಆಸ್ತಿಯ ಕಾನೂನುಗಳು ಮುಖ್ಯ ಬೇಡಿಕೆಯಾಗಬೇಕು. ಆ ರೀತಿಯ ಕಾನೂನು ಮದುವೆಯ ನಂತರ ಗಳಿಸುವ ಆಸ್ತಿಗೆ ಹೆಂಡತಿ ಹಾಗೂ ಗಂಡನಿಗೆ ಒಟ್ಟಾಗಿ ಬಾಧ್ಯತೆ ನೀಡುತ್ತದೆ. ಇದರಿಂದ ಅನ್ಯಾಯವಾಗಿ ಗಂಡಸರು ಷರ್ಟು ಬದಲಾಯಿಸುವಂತೆ ಹೆಂಡಂದಿರನ್ನು ಬದಲಾಯಿಸುವುದು ತಪ್ಪು ಬಿ.ಜೆ.ಪಿ. ಇಂತಹ ಬದಲಾವಣೆಯ ಬಗ್ಗೆ ಗಂ ವಾಗಿದ್ದರೆ ಇಂದು ಅಧಿಕಾರದಲ್ಲಿರುವ ರಾಜ್ ಇಂತಹ ಕಾನೂನುಗಳನ್ನು ಜಾರಿಗೆ ತರಬೇಕು. ಅ ಬರಿಯ ಮುಸ್ಲಿಂ ವೈಯಕ್ತಿಕ ಕಾನೂನುಗಳು ಮ ಬದಲಾಗಬೇಕು ಎಂದು ಹೇಳುವುದಾದರೆ ಅವರ ಆ ವನ್ನೇ ಅನುಮಾನಿಸಬೇಕಾಗುತ್ತದೆ. ಅದು ಮತಗಳ ಮಾಡುವ ತಂತ್ರವೆಂದು ಅರ್ಥವಾಗುತ್ತದೆ.

ಮೂಲ : **ಟೈಮ್ಸ್ ಆಫ್ ಇಂಡಿ**

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ

ವಿಳಾಸ :

" ಮಾನಸ "
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು-560 067